ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ -19

5ನೇ ವರ್ಷ 10ನೇ ಸಂಚಿಕೆ ಕೊಪ್ಪ 1-11-1986 ಭಾನುವಾರ ಬೆಲೆ 40 ಪೈಸೆ

ನೀರಿದ್ದೂ ಕಾಲುವೆಯಿಲ್ಲದೆ ಬರಡಾಗಿರುವ ಚಿನ್ನದ ಬೆಳೆಯ ಜಮೀನು

ಕೊಪ್ಪ : ಹರಂದೂರು ಗ್ರಾಮದ 65 ಮತ್ತು 71ನೇ ಸ. ನಂ. ಗಳಲ್ಲಿರುವ ಅತ್ಯಂತ ಫಲವತ್ತಾದ ಸುಮಾರು 16-17 ಎಕರೆಯಷ್ಟು ಭೂಮಿಗೆ ವರ್ಷವಿಡೀ ನೀರಿರುವಂಥ ಕೆರೆಯೊಂದರ ಆಶ್ರಯವಿದೆಯಾದರೂ ಅಲ್ಲಿಂದ ನೀರು ಬರುವ ಕಾಲುವೆ ದುರಸ್ತಿಯಿಲ್ಲದ್ದರಿಂದಾಗಿ ಅಷ್ಟೂ ಭೂಮಿ ಹಾಳು ಬಿದ್ದಿರುವ ವಿಪರ್ಯಾಸಕರ ಪರಿಸ್ಥಿತಿಯೊಂದು ಕಂಡು ಬಂದಿದೆ.

ಗುಣವಂತೆ ರಸ್ತೆಯಲ್ಲಿ, ಕೊಪ್ಪದ ಹೊರವಲಯದಲ್ಲೇ ಇರುವ ಈ ಭೂಮಿ ಸುಮಾರು 10-12 ಕುಟುಂಬಗಳ ಜೀವನಾಧಾರವಾಗಿದ್ದು, ಅವರಲ್ಲಿ ಹೆಚ್ಚಿನವರು ಇಂದು ನಿರ್ಗತಿಕರಾಗುವ ಹಂತಕ್ಕೆ ಮುಟ್ಟಿದ್ದಾರೆ.

ಗುಣವಂತೆ ರಸ್ತೆಯ ಇನ್ನೊಂದು ಪಾರ್ಶ್ವಕ್ಕಿರುವ "ನಾಗನ ಸಬ್ಬ ಕೆರೆ" ಯೆ ಈ ಜಮೀನಿಗೆ ನೀರಿನ ಆಶ್ರಯವಾದ ಕೆರೆ. ಲೋಕೋಪಯೋಗಿ ಇಲಾಖೆಗೆ ಸೇರಿದ ಇದು (ಆರ್.ಜಿ. ನಂ. 5) 1959ರಲ್ಲಿ ದುರಸ್ತಿಯಾಗಿದ್ದಾಗಿ ಶಿಲಾಫಲಕವೊಂದರಿಂದ ತಿಳಿದು ಬರುತ್ತದೆ. ಅಲ್ಲಿಂದ ಒಂದೂವರೆ ಫರ್ಲಾಂಗಿನಷ್ಟು ದೂರಕ್ಕೆ ನೀರು ಕಾಲುವೆಯಲ್ಲಿ ಬರಬೇಕಾಗಿದೆ. ಈ ಕೆರೆಗೆ ಸುಮಾರು ಅರ್ಧ ಮೈಲಿ ಮೇಲ್ಭಾಗದಿಂದಲೂ ಉತ್ತಮವಾದ ನೀರಿನ ಜಲ್ಪು ಇದ್ದು ವರ್ಷವಿಡೀ ನೀರಿರುತ್ತದೆಂದೂ ತುಂಬು ಹಾಕಿದರೆ ಕೇವಲ ಒಂದು-ಒಂದೂವರೆ ದಿನದೊಳಗೆ ಕೆರೆ ತುಂಬಿ ನಿಲ್ಲುತ್ತದೆಂದೂ ರೈತರು ಹೇಳುತ್ತಾರೆ.

ಈ ಕಾಲುವೆ ಮೂರ್ನಾಲ್ಕು ವರ್ಷದಿಂದೀಚೆಗೆ 2 ಕಡೆ ಜರಿದು ಹೋಗಿದೆಯಲ್ಲದೆ, ಗುಣವಂತೆ ರಸ್ತೆಯನ್ನು ದಾಟುವಲ್ಲಿ ಕಟ್ಟಿರುವ ಹಳೇ ಕಾಲದ ಮೋರಿಯ ಕಲ್ಲುಗಳೆಲ್ಲ ಒಳಗೇ ಕುಸಿದು ಕೂತು, ಅಲ್ಲಿಯವರೆಗೂ ಹೇಗೋ ಕಷ್ಟಪಟ್ಟು ತಂದ ನೀರೆಲ್ಲ ಈ ಕಲ್ಲುಗಳ ಸಂದಿಗಳಿಂದ ಕೆಳಗಿನ ಹಳ್ಳಕ್ಕೆ ಒಸರಿ ಹೋಗುತ್ತಿದೆ.

ಈ ಕೆರೆಯಲ್ಲಿ ಹೂಳು ತೆಗೆಯುವುದು, ಕಾಲುವೆಗೆ 2 ಕಡೆ ಕಟ್ಟಣೆ ಕಟ್ಟುವುದು ಹಾಗೂ ಈ ಮೋರಿಯನ್ನು ದುರಸ್ತಿ ಮಾಡುವುದು ಇವಿಷ್ಟು ಈಗ ತುರ್ತಾಗಿ ಆಗಬೇಕಾದ ಕೆಲಸಗಳಾಗಿದ್ದು, ಈ ಕೆರೆ ಮತ್ತು ಕಾಲುವೆಗೆ ಸಂಬಂಧಪಟ್ಟಂತೆ ಬೇರಾವುದೇ ಸಮಸ್ಯೆಗಳಿಲ್ಲ. ಇದಿಷ್ಟು ಕೆಲಸಕ್ಕೆ ಹೆಚ್ಚೆಂದರೆ 8 ರಿಂದ 10 ಸಾವಿರ ರೂ. ಖರ್ಚಾಗಬಹುದೆಂದು ರೈತರ ಅಂದಾಜು. ಆದರೆ ಇದಕ್ಕಾಗಿ ಸುಮಾರು 10 ವರ್ಷದಿಂದಲೂ ಪ್ರಯತ್ನಿಸುತ್ತಿದ್ದರೂ ಏನೂ ಪ್ರಯೋಜನವಾಗಿಲ್ಲವೆನ್ನುತ್ತಾರೆ. ಗೋವಿಂದಗೌಡರು ಶಾಸಕರು, ಮಂತ್ರಿಗಳು ಆದ ಮೇಲೆ ಒಂದೆರಡು ಬಾರಿ ರಸ್ತೆಯಲ್ಲಿ ಅವರ ಕಾರನ್ನು ನಿಲ್ಲಿಸಿ, ಈ ಬಗ್ಗೆ ಮನವಿ ಕೊಡಲಾಗಿತ್ತು. ಅನಂತರ ಕಳೆದ ವರ್ಷ ಯಾರೋ ಇಂಜಿನಿಯರ್ ಬಂದು, ಕೆರೆ, ಕಾಲುವೆ ಎಲ್ಲ ನೋಡಿ ಅದೇನೇನೋ ಮಾಡುವುದಾಗಿ ಹೇಳಿ ಹೋದದ್ದು ಮಾತ್ರ ಉಂಟಂತೆ.

(5ನೇ ಪುಟಕ್ಕೆ)

ಶಂಕರ್ ಕಂಪೆನಿ ಕಾರ್ಮಿಕ ಸಂಘದಿಂದ

ಶೀಘ್ರವೇ ಬೇಡಿಕೆ ಪತ್ರ ಮಂಡನೆ

ಕೊಪ್ಪ: ನ್ಯಾಯಯುತವಾದ ಸೌಲಭ್ಯಗಳನ್ನು ಪಡೆಯಲು ಶಂಕರ್ ಕಂಪೆನಿಯ ಕಾರ್ಮಿಕ ಸಂಘ ಶೀಘ್ರದಲ್ಲೇ ಬೇಡಿಕೆ ಪತ್ರ (ಚಾರ್ಟರ್ ಆಫ್ ಡಿಮ್ಯಾಂಡ್ಸ್)ವನ್ನು ಸಲ್ಲಿಸಲು ನಿರ್ಧರಿಸಿದ್ದು, ಇದಕ್ಕಾಗಿ ಸಂಘದ ಕಾರ್ಯದರ್ಶಿಯವರ ನೇತೃತ್ವದಲ್ಲಿ ಐವರು ಸದಸ್ಯರ ಸಮಿತಿಯೊಂದನ್ನು ರಚಿಸಲಾಗಿದೆ

ಅ. 19ರಂದು ನಡೆದ ಸಂಘದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಯಿತು.

ಕಾರ್ಮಿಕರಿಗೆ ನ್ಯಾಯವಾದ, ಕಾನೂನುಬದ್ಧ ಸೌಲಭ್ಯಗಳನ್ನು ನೀಡದೇ, ಅದರ ಬದಲಿಗೆ ಸಂಘವನ್ನು ಮುರಿಯಲು ಕಾರ್ಮಿಕರಿಂದ ಬಲಾತ್ಕಾರವಾಗಿ ಸಂಘಕ್ಕೆ ರಾಜೀನಾಮೆ ಬರೆಸಿಕೊಳ್ಳುವ ಸರ್ಕಸ್ಸನ್ನು ಮಾಲೀಕರು ಇನ್ನೂ ನಡೆಸುತ್ತಿರುವುದಕ್ಕೆ ಬಿ.ಎಂ.ಎಸ್. ರಾಜ್ಯ ಕಾರ್ಯದರ್ಶಿ ಕೊರಗಪ್ಪ ಸುವರ್ಣ ತೀವ್ರವಾಗಿ ವಿಷಾದಿಸಿದರು. ಕಾರ್ಮಿಕರಿಗೆ ಕಂಪೆನಿ ನೀಡುತ್ತಿರುವ ವಿವಿಧ ರೀತಿಯ ಕಿರುಕುಳವನ್ನು ಹಲವು ಕಾರ್ಮಿಕರು ವಿವರಿಸಿದರು. ಸಭೆ ಇದನ್ನು ಉಗ್ರವಾಗಿ ಖಂಡಿಸಿತು.

ಸಭೆಯಲ್ಲಿ ಕೊಪ್ಪದ ಜನಪ್ರಿಯ ನ್ಯಾಯವಾದಿ ಹಾಗೂ ಸಂಘದ ಗೌರವ ಕಾನೂನು ಸಲಹೆಗಾರರಾದ ಎಚ್. ಡಿ. ನಾಯಕ್ ಮಾತನಾಡಿ, ಕಾರ್ಮಿಕರ ಕಾನೂನುಬದ್ಧ ಹೋರಾಟಕ್ಕೆ ಯಾವಾಗಲೂ ಜಯ ಸಿದ್ಧ. ಆಂತೆಯೇ ಕಾನೂನು ಉಲ್ಲಂಘಿಸುವ ಮಾಲೀಕರ ವಿರುದ್ಧ ಕಾನೂನು ಮೂಲಕವೇ ಹೋರಾಡಬೇಕು ಎಂದರು.

ಕಾರ್ಯದರ್ಶಿ ಸಂಜೀವ ಸ್ವಾಗತಿಸಿ, ಕಾರ್ಯಕಾರಿ ಸಮಿತಿ ಸದಸ್ಯ ಲಕ್ಷ್ಮಣ ರಾವ್ ವಂದಿಸಿದರು

ಕು.ವೆಂ.ಪು., ಕೃಷ್ಣಶಾಸ್ತ್ರಿ, ಲಕ್ಷ್ಮೀಶರಿಗೆ ಸ್ಮಾರಕಗಳು

ಕಡೂರು: ನಮ್ಮ ಜಿಲ್ಲೆಯಲ್ಲಿ ಜನ್ಮ ತಳೆದ ಮೂವರು ಸುಪ್ರಸಿದ್ಧ ಕವಿಗಳಾದ ಲಕ್ಷ್ಮೀಶ, ಎ.ಆರ್. ಕೃಷ್ಣಶಾಸ್ತ್ರಿ ಹಾಗೂ ಕುವೆಂಪು ಇವರ ಜ್ಞಾಪಕಾರ್ಥವಾಗಿ ಅವರವರ ಜನ್ಮಸ್ಥಳಗಳಲ್ಲಿ ಸ್ಮಾರಕಗಳನ್ನು ಜಿಲ್ಲಾ ಶತಮಾನೋತ್ಸವ ವರ್ಷವಾದ ಈ ಸಂದರ್ಭದಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೆಂದು ಜಿಲ್ಲಾಧಿಕಾರಿಗಳು ಸಮೀಪದ ದೇವನೂರಿನಲ್ಲಿ ಈಚೆಗೆ ತಿಳಿಸಿದರು. ಇವರುಗಳ ಕೈಬರಹಗಳು ಹಾಗೂ ಅವರು ಉಪಯೋಗಿಸುತ್ತಿದ್ದ ವಸ್ತುಗಳೇನಾದರೂ ಇದ್ದಲ್ಲಿ ಗ್ರಾಮಸ್ಥರು ಅವುಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು ಅವರು ವಿನಂತಿಸಿ ಅವುಗಳನ್ನು ಸ್ಮಾರಕಗಳಾಗಿ ಸಂರಕ್ಷಿಸಲಾಗುವುದು ಎಂದು ತಿಳಿಸಿದರು.

ಈ ವಾರ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ಲೇಖನವನ್ನೊಳಗೊಂಡ 6 ಪುಟಗಳ ಸಂಚಿಕೆ ಪ್ರಕಟಿಸುವುದಕ್ಕಾಗಿ ನಮ್ಮ 26-10-86ರ ಸಂಚಿಕೆ ಪ್ರಕಟವಾಗಲಿಲ್ಲ. —ಸಂ.

ರಾಜ್ಯ ಜೇಸೀಸ್ ಸಮ್ಮೇಳನದಲ್ಲಿ

ಮೇರುತಿ ಜೇಸೀಸ್‌ಗೆ ಎರಡು ಪ್ರಶಸ್ತಿ

ಬಿಳಾಲುಕೊಪ್ಪ : ಸ್ಥಾಪನೆಯಾಗಿ ಕೇವಲ 8 ತಿಂಗಳಾಗಿರುವ ಇಲ್ಲಿನ ಮೇರುತಿ ಜೇಸೀಸ್ ಸಂಸ್ಥೆ ಅ. 18, 19ರಂದು ಶಿವಮೊಗ್ಗದಲ್ಲಿ ನಡೆದ ರಾಜ್ಯ ಜೇಸೀಸ್ ಸಮ್ಮೇಳನದಲ್ಲಿ 2 ಪ್ರಶಸ್ತಿಗಳನ್ನು ಗಳಿಸಿಕೊಂಡಿದೆ.

ಅತ್ಯುತ್ತಮ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮಕ್ಕಾಗಿ ಹಾಗೂ ರಾಜ್ಯದ ಅತ್ಯುತ್ತಮ ಹೊಸ ಜೇಸೀ ಸಂಸ್ಥೆ ಎಂಬುದಾಗಿ ಈ ಪ್ರಶಸ್ತಿಗಳು ಲಭಿಸಿವೆ. ಅಲ್ಲದೆ ಸಮ್ಮೇಳನಕ್ಕೆ ಪ್ರಥಮ ನೋಂದಣಿ ಮಾಡಿಸಿದ ಪ್ರಶಸ್ತಿಯೂ ಈ ಸಂಸ್ಥೆಗೆ ದಕ್ಕಿದೆ. ಹಾಗೆಯೇ, ಹಲವಾರು ಕಾರ್ಯಕ್ರಮಗಳಲ್ಲಿ 'ಮಾನ್ಯತೆ'ಯನ್ನು ಸಹ ಪಡೆದಿದೆ.

ಸಮ್ಮೇಳನದಲ್ಲಿ ರಾಜ್ಯದ 150ಕ್ಕೂ ಹೆಚ್ಚು ಘಟಕಗಳು ಭಾಗವಹಿಸಿದ್ದು, ವಿತರಿಸಲಾದ ಒಟ್ಟು ಪ್ರಶಸ್ತಿಗಳು 21.

ಶೃಂಗೇರಿ ಜೇಸೀಸ್‌ಗೆ 2 ಪ್ರಶಸ್ತಿ

'ಅತ್ಯುತ್ತಮ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ' (ಪ್ರಥಮ) ಹಾಗೂ ಅತ್ಯುತ್ತಮ ಕಾರ್ಯನಿರ್ವಹಣಾ ಘಟಕವಾಗಿ (ದ್ವಿತೀಯ) ಎರಡು ಪ್ರಶಸ್ತಿಗಳನ್ನು ಶೃಂಗೇರಿ ಜೇಸೀಸ್ ಪಡೆಯಿತು. ಅಲ್ಲದೆ ಈ ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಎಂ. ಜಿ. ಸೋಮಶೇಖರ್ ಅವರು ನೂರಕ್ಕೆ ನೂರು ಮತಗಳಿಸಿ ಐವರಲ್ಲೊಬ್ಬ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಬರಗಾಲ — ಏಕೆ ಮತ್ತು ಹೇಗೆ ?

—ಒಂದು ಚಾರಿತ್ರಿಕ ವಿಶ್ಲೇಷಣೆ

ನಮ್ಮ ರಾಜ್ಯವಿಡೀ ಕಳೆದ ನಾಲ್ಕೈದು ವರ್ಷಗಳಿಂದ ಹಿಂದೆಂದೂ ಕಾಣದಿದ್ದಷ್ಟು ಭೀಕರವಾದ ಬರಗಾಲಕ್ಕೆ ತುತ್ತಾಗಿದೆಯಷ್ಟೆ. ಈ ವರ್ಷವೂ ಪರಿಸ್ಥಿತಿ ಹೆಚ್ಚೇನೂ ಸುಧಾರಿಸುವ ಭರವಸೆ ಕಾಣುತ್ತಿಲ್ಲ. ಬದಲಿಗೆ, ಈ ವರ್ಷ ಮಲೆನಾಡಿನಲ್ಲಿ ಕೂಡ ಮಳೆಗಾಲ ತೀವ್ರ ಏರುಪೇರಾಗಿದ್ದು, ಭತ್ತವನ್ನೇ ಆಶ್ರಯಿಸಿರುವ ಬಹು ಸಂಖ್ಯಾತ ಬಡ ರೈತರು ತೀವ್ರ ಸಂಕಷ್ಟಕ್ಕೆ ಸಿಕ್ಕಿದ್ದಾರೆ.

ಬರಗಾಲಕ್ಕೆ ಪ್ರಮುಖ ಕಾರಣ ಮಳೆಯ ಅಭಾವವೆಂದೂ, ಮಳೆ ಸರಿಯಾಗಿ ಆಗದಿರುವುದಕ್ಕೆ ಕಾಡಿನ ವಿನಾಶವೇ ಬಹುಮುಖ್ಯ ಕಾರಣವೆಂದೂ ನಮಗೆಲ್ಲ ಗೊತ್ತಿದೆ. ಆದರೆ ಕೆಲವು 'ಬುದ್ಧಿವಂತರು' "ಮಳೆಗೂ ಕಾಡಿಗೂ ಸಂಬಂಧವಿಲ್ಲ" ಎಂದು ವಾದಿಸತೊಡಗಿದ್ದಾರೆ— 'ನೀಲಗಿರಿ ಅಪಾಯಕಾರಿಯಲ್ಲ' ಎಂದು ವಾದಿಸತೊಡಗಿರುವಂತೆ!

ಬರಗಾಲಕ್ಕೆ ಇದೊಂದೇ ಕಾರಣವಲ್ಲ; ಆಸ್ತಿವಂತಿಕೆ-ಆಸ್ತಿಯಿಲ್ಲದಿರುವಿಕೆ, ಆಸ್ತಿ ಹೆಚ್ಚಿಸಿಕೊಳ್ಳುವಿಕೆ-ನಿರ್ಗತಿಕರಾಗುವಿಕೆ ಇವುಗಳಿಗೆ ಕಾರಣವಾದ ನಮ್ಮ ಸಮಾಜದ ವರ್ಗರಚನೆ ಕೂಡ ಹೇಗೆ ಬರಕ್ಕೆ ಕಾರಣವಾಗುತ್ತದೆ (ಏಕೆಂದರೆ ಈ ವರ್ಗರಚನೆಯೇ ಆಸ್ತಿವಂತರ ಮಿತಿಯಿಲ್ಲದ ದುರಾಶೆಗೆ ಮೂಲ) ಎಂಬುದನ್ನು ವಿಶ್ಲೇಷಿಸುವ ಒಂದು ಲೇಖನ ಇಲ್ಲಿದೆ.

ಇಂಥ ಸಾಮೂಹಿಕವಾದ ಸಾವು-ನೋವಿನ ಹಿನ್ನೆಲೆಯಲ್ಲಿ, ಇಡೀ ರಾಜ್ಯದ ಪ್ರಾಮಾಣಿಕ ಪ್ರಜ್ಞಾವಂತರೆಲ್ಲರ ತೀವ್ರ ಪ್ರತಿಭಟನೆಯ ನಡುವೆಯೂ ಕಳೆದ ವರ್ಷ ನಮ್ಮ ಸರ್ಕಾರ 'ವಿಶ್ವ ಕನ್ನಡ ಮೇಳ'ವೆಂಬ ಅದ್ದೂರಿ ಮೇಜವಾನಿಯನ್ನು ಉಡಾಯಿಸಿಯೇ ಬಿಟ್ಟಿತಲ್ಲ, ಅದರ ಕಟು ನೆನಪು ಸಹ ಈ ಸಲದ ಕನ್ನಡ ರಾಜ್ಯೋತ್ಸವದ ಜೊತೆಯಲ್ಲಿ ಸೇರಿಕೊಂಡಿದ್ದು, ಈ ಲೇಖನ ಆ ನೋವನ್ನು ದಾಖಲಿಸುವುದಕ್ಕೂ ಒಂದು ಸಾಧನವಾಗಿದೆ.

ಕರ್ನಾಟಕದ ಬಹುದೊಡ್ಡ ಭಾಗ—ಬಹುಶಃ ರಾಜ್ಯದ ಮುಕ್ಕಾಲು ಭಾಗಕ್ಕೂ ಹೆಚ್ಚು — ಕಳೆದ 5 ವರ್ಷಗಳಿಂದ ಭೀಕರ ಬರಗಾಲದ ದವಡೆಗೆ ಸಿಕ್ಕಿ ತತ್ತರಿಸಿದೆ. ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡಂತೆ ಕರ್ನಾಟಕದ ನಂದನವನವಾಗಿರುವ ಕರಾವಳಿ ಮತ್ತು ಮಲೆನಾಡ ಜಿಲ್ಲೆಗಳೂ ಸಹ ತೊಂದರೆಗೆ ಒಳಗಾಗಿವೆ. ಉತ್ತರ ಕನ್ನಡ ಜಿಲ್ಲೆಯೊಂದನ್ನುಳಿದು ರಾಜ್ಯದ ಇತರ ಎಲ್ಲಾ ಜಿಲ್ಲೆಗಳೂ ಬರಗಾಲದ ಸಂಕಷ್ಟಕ್ಕೆ ಸಿಕ್ಕಿವೆ. ರಾಜ್ಯದ ಯೋಜನಾ ಕಮಿಷನರ್‌ರವರ ಅಂದಾಜಿನ ಪ್ರಕಾರ ಈ ವರ್ಷ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಕಡೇ ಪಕ್ಷ ಶೇ. 46ರಷ್ಟಾದರೂ ಇಳಿತ ಉಂಟಾಗಬಹುದು. ನೂರಾರು ಹಳ್ಳಿಗಳನ್ನು ತೊರೆದು ಜನರು ಲಕ್ಷೋಪಲಕ್ಷನಾಗಿ ವಲಸೆ ಹೋಗುತ್ತಿರುವ ಬಗ್ಗೆ ವರದಿಗಳಿವೆ.

ಹೀಗೆ ಕ್ಷಾಮ–ಡಾಮರಗಳು ಭಾರತದ ಬೇರೆ ಬೇರೆ ಕಡೆಗಳಲ್ಲೂ ಆಗಾಗ್ಗೆ ದಾಳಿ ನಡೆಸಿ, ಅಪಾರ ಸಾವು–ನೋವುಗಳಿಗೆ ಕಾರಣವಾಗಿವೆ. ಇದು ಪ್ರಪಂಚದ ಇತರ ಭಾಗಗಳನ್ನೂ ಬಿಟ್ಟಿಲ್ಲ. (ಉದಾ : ಇಥಿಯೋಪಿಯ ದೇಶದಲ್ಲಿ ಕಳೆದ ಏಳೆಂಟು ವರ್ಷಗಳಿಂದ ತಾಂಡವವಾಡುತ್ತಿರುವ ಬರಗಾಲ.)

ಹೀಗಿರಬೇಕಿತ್ತು....

ಪ್ರಾಣಿಗಳಿಗಿಂತ ಅತ್ಯಂತ ಬುದ್ಧಿವಂತನೆಂದು ನಾವು ಒಪ್ಪಿರುವ ಮನುಷ್ಯಕುಲ ತನ್ನ ಸಹಜವಾದ (ನೈಸರ್ಗಿಕವಾದ) ಗುಣಗಳನ್ನು ಬಳಸಿ ಇಂಥ ವಿಪತ್ತುಗಳನ್ನು ಎದುರಿಸುವುದಾದಲ್ಲಿ, ದೇಶದ ಎಲ್ಲ ಮನುಷ್ಯರು ಒಂದಾಗಿ ವಿಪತ್ತಿಗೆ ಸಿಕ್ಕವರಿಗೆ ಹೆಗಲಿಗೆ ಹೆಗಲಾಗಿ ನಿಂತು ವಿಪತ್ತನ್ನು ಹೋಲಿಸಬೇಕು; ಅದಕ್ಕೆ ಕಾರಣವಾದ ಪರಿಸ್ಥಿತಿ ಪುನಃ ಬಾರದಂತೆ ಅಳಿಸಿ ಹಾಕಬೇಕು; ವಿಪತ್ತಿಗೀಡಾದವರೂ ಸಹ ಪರಸ್ಪರ ಸಹಕಾರದಿಂದ, ಆತ್ಮ ಬಲದಿಂದ ವಿಪತ್ತನ್ನೆದುರಿಸಿ ಜೈಸಬೇಕು; ಜನರನ್ನಾಳುವ ಸರ್ಕಾರಗಳು ತಮ್ಮ ಮತ್ತು ದೇಶದ ಜನತೆಯ ಸಾಧ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಒಗ್ಗೂಡಿಸಿ, ವಿಪತ್ತನ್ನು ಕೊನೆಗಾಣಿಸಬೇಕು; ಹಾಗೊಂದು ವೇಳೆ ಮಾಡದಿದ್ದರೆ ಜನ ಇಂಥ ಸರ್ಕಾರಗಳ ವಿರುದ್ಧ ಸಿಡಿದೆದ್ದು ಅವನ್ನು ಕಿತ್ತು ಹಾಕಬೇಕು.........

'ರಾ ಜ ಕೀ ಯ'

ಆದರೆ ಇಲ್ಲಿ ಹಾಗಾಗುವುದೇ ಇಲ್ಲವಲ್ಲ? ನಮ್ಮ ರಾಜ್ಯದ ಪ್ರಸಕ್ತ ಬರಗಾಲ ಈಚಿನ ಕೆಲವಾರು ವರ್ಷಗಳಲ್ಲೇ ಅತ್ಯಂತ ಭೀಕರವಾದುದಾದರೂ ನಮ್ಮ ಕಂಪ್ಯೂಟರ್ 'ಹೈದ' ರಾಜೀವ್ ಅದನ್ನು 'ನಂಬಲು' ಸಿದ್ಧವಿಲ್ಲ. ಅದಕ್ಕೆ ಕಾರಣಗಳೂ ಇಲ್ಲದಿಲ್ಲ. ಇದರಿಂದ ಕೇಂದ್ರ ಸರಕಾರದ ಮೇಲಿರುವ ಆರ್ಥಿಕ ಮತ್ತು ನೈತಿಕ ಜವಾಬ್ದಾರಿಯಿಂದ ಕಳಚಿಕೊಳ್ಳುವುದಲ್ಲದೆ, ಇಂಥ ಪರಿಸ್ಥಿತಿಯಲ್ಲಿ "ತಮ್ಮದಲ್ಲದ" ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುವುದೂ ಅವರ ಉದ್ದೇಶ. ಆದರೆ ಚಾಣಕ್ಯ ಹೆಗಡೆ ಸರ್ಕಾರ ಇಕ್ಕಟ್ಟಿಗೆ ಸಿಕ್ಕೂ ಸಿಕ್ಕದೆ ಉಳಿದುಕೊಂಡಿರುವುದು ಬಹುಶಃ ಪವಾಡಗಳ ಈ ದೇಶದಲ್ಲಿ ಮಾತ್ರ ಸಾಧ್ಯವಿರುವ ಒಂದು ಪವಾಡವಿರಬಹುದು!

ಹೀಗೆ ಈ ಆಳುವ ಮಂದಿ ಒಂದೆಡೆ ತಮ್ಮ ತಮ್ಮ 'ಬಲ' ಹೆಚ್ಚಿಸಿಕೊಳ್ಳಲು ಈ ದುರಂತವನ್ನೂ ಸಹ ಒಂದು ಮಾಧ್ಯಮವಾಗಿ ಬಳಸಿಕೊಳ್ಳುತ್ತಿದ್ದರೆ ಇನ್ನೊಂದೆಡೆ ಇದನ್ನು ನೇರವಾಗಿ ಎದುರಿಸಬೇಕಾದ ರಾಜ್ಯ ಸರ್ಕಾರ ತನ್ನ ಜವಾಬ್ದಾರಿ ಪಾಲಿಸುವಲ್ಲಿ ಎಷ್ಟು ಯಶಸ್ವಿಯಾಗಿದೆ ಎಂಬುದೂ ವಿಚಾರಾರ್ಹ. ಮುಖ್ಯಮಂತ್ರಿಯೇನೋ ಬರ ಪರಿಹಾರ ನಿಧಿಗೆ ಉದಾರ ದೇಣಿಗೆ ನೀಡುವಂತೆ ರಾಜ್ಯದ ಜನತೆಗೆ ಕರೆಕೊಟ್ಟರು. ಜನತೆಯೂ ತಕ್ಕಮಟ್ಟಿಗೆ ವಿವಿಧ ರೀತಿಯಲ್ಲಿ ನೆರವು, ದೇಣಿಗೆ ಕೊಟ್ಟರು. ಅಷ್ಟೇ ಅಲ್ಲ, ಬೇರೆಲ್ಲ ಪ್ರದೇಶಗಳ ಜನ ತಮ್ಮಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನೂ ತಡವಾಗಲು ಅವಕಾಶ ಕೊಟ್ಟು, ಬೊಕ್ಕಸದ ಹಣವನ್ನೆಲ್ಲ ಬರ ಪರಿಹಾರಕ್ಕೆ ಬಳಸಿಕೊಳ್ಳಲು ಅವಕಾಶ ಕೊಟ್ಟರು. ಮುಖ್ಯಮಂತ್ರಿಯೂ ಸಹ, "ಜನತೆಯಿಂದ 'ನಿರೀಕ್ಷೆಗೂ ಮೀರಿ' ಹಣ ಸಂಗ್ರಹವಾಗಿರುವುದಾಗಿ" ಹೇಳಿಕೆ ಕೊಟ್ಟರು. ಎಷ್ಟು ಸಂಗ್ರಹವಾಯಿತು ಎಂಬುದು ಮಾತ್ರ ಸ್ವಲ್ಪ ನಿಗೂಢವೇ!

ಹೀ ಗೇ ಕೆ ?

ಆದರೂ.... ಒಂದು ರಾಜ್ಯದ ಜನತೆಗೆ ಮತ್ತು ಸರ್ಕಾರಕ್ಕೆ ಸಾಧ್ಯವಿರುವುದು ಇಷ್ಟೇ ಏನು? ಎಂಬ ಪ್ರಶ್ನೆ ಒಂದು ಕಡೆಗಾದರೆ, ಈ ವಿಪತ್ತಿಗೆ ಸಿಕ್ಕಿದ ಜನ ಅದರ ಪರಿಹಾರದ ದಿಕ್ಕಿನಲ್ಲಿ ಸರಕಾರದಿಂದ ಅಗತ್ಯ ಪ್ರಮಾಣದ (ಸಮರದೋಪಾದಿಯ) ನೆರವು–ಕಾರ್ಯಕ್ರಮ ಬಾರದಾಗ, ಬಂದ 'ಕಾಸಿನ ಮಜ್ಜಿಗೆ'ಯನ್ನೂ ಲಾಭಕೋರ ಮಧ್ಯವರ್ತಿಗಳು ಮತ್ತು ಆಡಳಿತ ಯಂತ್ರದ ಸೇವಕರು ಕೀಲುಗಳಾದ ಅಧಿಕಾರಿಗಳು ತಮ್ಮಲ್ಲೇ ಇಂಗಿಸಿಕೊಳ್ಳುತ್ತಿರುವಾಗ, ಇಂಥ ಸರ್ಕಾರದ ವಿರುದ್ಧವಾಗಲಿ ಅಥವಾ ಈ ದುಷ್ಟ ಭಕ್ಷಕರನ್ನು ಹತೋಟಿಯಲ್ಲಿಡಲಾಗದ ಕ್ರೂರ ವ್ಯವಸ್ಥೆಯ ವಿರುದ್ಧವಾಗಲಿ ಸಿಡಿದೇಳುವುದಿಲ್ಲವೇಕೆ? ಆತ್ಮ ಬಲದಿಂದ, ವಿವೇಚನೆ–ಸಹಕಾರಗಳಿಂದ ಇಲ್ಲೇ ನಿಂತು ತಮ್ಮ ವಂಶಪಾರಂಪರ್ಯವಾದ ತಾಣವನ್ನು ಉಳಿಸಿಕೊಳ್ಳದೆ ಕ್ರಿಮಿಗಳಂತೆ, ಮೂಕ ಪ್ರಾಣಿಗಳಂತೆ ಯಾಕೆ ಲಕ್ಷೋಪಲಕ್ಷವಾಗಿ ತಮ್ಮ ಕರುಳ ಸಂಬಂಧಗಳನ್ನೆಲ್ಲ ಹರಿದು ತೊರೆದು ವಲಸೆ ಹೋಗುತ್ತಿದ್ದಾರೆ? (ಕಾಡು ಪ್ರಾಣಿಗಳು ವಲಸೆ ಹೋದರೂ ತಮ್ಮ ಕರುಳ ಬಳ್ಳಿಗಳ ಸಮೇತ ಹೋಗುತ್ತವೆ ಹೊರತು ಹೀಗೆ ಬಿರುಗಾಳಿಗೆ ತೂರಿದ ಕಸಗಳಂತೆ ದಿಕ್ಕಾಪಾಲಾಗುವುದಿಲ್ಲ ಅಲ್ಲವೆ?)

ಮೌ ಢ್ಯ

ಇಷ್ಟೆಲ್ಲ ನೋವುಗಳನ್ನು ನುಂಗಿಕೊಂಡು ಬರ ಒಂದು ನೈಸರ್ಗಿಕ ಮತ್ತು ಮಾನವ ನಿರ್ಮಿತ ವಿಪತ್ತು ಎಂಬುದನ್ನು ಗ್ರಹಿಸದೆ, ಸಮಾಜದ ಲಾಭ ಬಡುಕರು ಮತ್ತು ಸರ್ಕಾರದ ಮೇಲೆ ಈ ವಿಪತ್ತಿನ ಜವಾಬ್ದಾರಿಯನ್ನು ಹೊರಿಸದೆ, ಅದು ದೈವ ಸಂಕಲ್ಪವೆಂದೋ ತಮ್ಮ ಪ್ರಾರಬ್ಧ ಕರ್ಮವೆಂದೋ ನಂಬಿಕೊಂಡು, ಸರ್ಕಾರ ಕೊಡುವ 'ಪರಿಹಾರ'ವೆಂಬ ಹೆಸರಿನ ಭಿಕ್ಷೆಯನ್ನು ದೇವರ ಕೃಪೆಯೆಂದು ಕೃತಜ್ಞತಾಭಾವದಿಂದ ಜನತೆ ಸ್ವೀಕರಿಸುವಂತೆ, ಸರ್ಕಾರ, ಆಳುವ ವರ್ಗಗಳು ಮತ್ತು ಅವರ ಬೆಂಗಾವಲಾಗಿರುವ ಧಾರ್ಮಿಕ ಮುಖಂಡರು ಜನತೆಯ ಮನಸ್ಸನ್ನು ರೂಪಿಸಿಕೊಂಡು ಬಂದಿದ್ದಾರೆ. ಇನ್ನೂ ಅದನ್ನೇ ಬೆಳೆಸುತ್ತಲೂ ಇದ್ದಾರೆ.

ಈ ನೀತಿಗಳು ನಿಜವಾಗಿಯೂ ಹೇಗೆ ಕೆಲಸ ಮಾಡಿವೆ ಮತ್ತು ಸಮಾಜದ ವರ್ಗ ರಚನೆಯಿಂದ ಅವು ಹೇಗೆ ಉಗನುವಾಗಿವೆ ಎಂಬುದನ್ನು ಮನಗಾಣಲು ಇದುವರೆಗೆ ಕರ್ನಾಟಕಕ್ಕೆ ಅಪ್ಪಳಿಸಿರುವ ಎರಡು ಪ್ರಮುಖ ಬರಗಾಲಗಳನ್ನು ತೆಗೆದುಕೊಳ್ಳೋಣ. ಇವುಗಳಲ್ಲಿ ಮೊದಲನೆಯದು 1877ರಲ್ಲಿ ಬಂದು 1881ರವರೆಗೂ ಇದ್ದಿತಾದರೆ ಎರಡನೆಯದು 1918ರಲ್ಲಿ ತಗುಲಿ 1920ರವರೆಗೂ ಉಳಿದಿತ್ತು.

ಪದ್ಯದಂಕಣ

ವಿಶುಕುಮಾರ್ ಇನ್ನಿಲ್ಲ

ವಿಶು,
ಆಕಾಶವಾಣಿ ಬಿತ್ತರಿಸಿತು
ನಿನ್ನ ಸಾವಿನ ಸುದ್ದಿ
ಎದೆ ನಡುಗಿತು
ಹೇಳಲಾಗದ ನೋವು
ಸಿಡುಲ ಹಿಂಡಿ ತೆಗೆಯಿತು
ನಿನ್ನ ಹೃದಯ ಶ್ರೀಮಂತಿಕೆ
ಬುದ್ಧಿವಂತಿಕೆ
ಹರಿತ ಶೈಲಿಯ ಒಕ್ಕಣಿಕೆ
ವಿಧಿ ಬೀಸಿದ ಬಿರುಗಾಳಿಗೆ
ಮುಳುಗಿತೇ ಗೆಳೆಯ ಬಾಳ ನೌಕೆ
ಕರಾವಳಿಯ ಉದ್ದಗಲಕ್ಕೂ
ನಿನ್ನೊಡನೆ ಓಡಾಡದ ನೆನಪು
ಇನ್ನೂ ಹಸಿರಾಗಿದೆ
ನಿನ್ನ ನಾಲ್ಕಾರು ಕನಸಿನ
ಮೊಗ್ಗುಗಳನ್ನು
ಅಂತರಂಗದಲ್ಲಿ ಚೆಲ್ಲಿಕೊಂಡಿದ್ದೇನೆ
ಅರಳಿಸಲು ಪ್ರಯತ್ನಿಸುತ್ತೇನೆ
ಗೆಳೆಯಾ
ಸದಾ ನಿನ್ನ ನೆನಪಿನಲ್ಲಿರುತ್ತೇನೆ
ಕನಸಿನಲ್ಲಿ ಬರುತ್ತಿರು
ಕಿವಿಮಾತು ಹೇಳುತ್ತಿರು
ನನ್ನ ಚಟುವಟಿಕೆಗೆ
ಜೊತೆಯಾಗಿರು !
ಕನ್ನಡಮ್ಮನ ಮುದ್ದು ಕುಮಾರ
ವಿಶುಕುಮಾರ
ನಾಡು–ನುಡಿಗೆ
ನೀ ಸಲ್ಲಿಸಿದ ಸೇವೆ
ಅಜರಾಮರ

—ಹು. ವಾ. ಶ್ರೀವತ್ಸ,
ಹೇರೂರು.

ನನ್ನ ದಿನಗಳು

ಸಮಸ್ಯೆಗಳು ಬಗೆ
ಬಗೆ ಹರಿಯಿತೆಂದು
ರಾತ್ರಿ ಮಲಗಿ ಬೆಳಗ್ಗೆ
ನೋಡುವಾಗಲೊಂದು ಕಂದಕ
ಮುಚ್ಚಿದಷ್ಟೂ ತೆರೆಯುವ
ಮತ್ತೆ ಮತ್ತೆ ಕುಸಿಯುವ
ಹೆಜ್ಜೆ ಹೆಜ್ಜೆಗೂ ಆಕಸ್ಮಿಕ
ಲೋಕೋಪಯೋಗಿ ಇಲಾಖೆಯ
ಕಂಟ್ರಾಕ್ಟರ್ ಕಟ್ಟಿದ
ರಸ್ತೆ ಬದಿಯ ಕಟ್ಟಣೆ
ಯಂತೆ ತಡೆಯದಾಗಿವೆ
ತಾಪತ್ರಯದ ಬಿರುಸು
ಮಳೆಗೆ ಈ ನನ್ನ ದಿನಗಳು.

—ಎಲ್. ಎಸ್. ಸದಾಶಿವ ಭಾಸರಿ,
ಲೋಕೇಶ್ವರ.

ವಸಾಹತುಶಾಹಿ ಮತ್ತು 1877-81ರ ಬರಗಾಲ

1877ರ ಮೇ ತಿಂಗಳಲ್ಲಿ ಮೊದಲ ಮುಂಗಾರು ವಿಫಲಗೊಂಡು ಹಳೇ ಮೈಸೂರಿನ ಜಿಲ್ಲೆಗಳಿಗೆ ಬಲವಾದ ಪೆಟ್ಟು ಬಿತ್ತು.

(ಮೂರನೇ ಪುಟಕ್ಕೆ)

ಬರಗಾಲ — ಏಕೆ ಮತ್ತು ಹೇಗೆ ?

(ಎರಡನೇ ಪುಟದಿಂದ)

ಬರಗಾಲ ಸ್ಥಿತಿಯು ಮುಗಿಯುವಾಗ ಅಂದರೆ 1881ರ ಹೊತ್ತಿಗೆ ಮೈಸೂರು ರಾಜ್ಯದ ಜನಸಂಖ್ಯೆಯ ಶೇಕಡ 17 ಭಾಗ ಅಂದರೆ ಸುಮಾರು ಹತ್ತು ಲಕ್ಷ ಜನರು ಹಸಿವು, ಉಪವಾಸಗಳಿಂದ ಸತ್ತರು. 1878ರಲ್ಲಿ ನಡೆದ ಒಂದು ಗಣತಿಯ ಪ್ರಕಾರ ಬರಗಾಲ ಪೀಡಿತವಾದ ಒಂದು ಹೋಬಳಿಯಲ್ಲಿ ಶೇಕಡ 15ರಷ್ಟು ಜನರು ಸತ್ತಿದ್ದು, ಶೇ. 7.9ರಷ್ಟು ವಲಸೆ ಹೋಗಿರುವುದಲ್ಲದೆ ಶೇ. 5.77 ರಷ್ಟು ಜನರು ಯಾವ ಲೆಕ್ಕಕ್ಕೂ ಸಿಗದೇ ಇದ್ದುದು ಕಂಡುಬಂದಿದೆ. ಬರಗಾಲ ಕಮೀಶನರ್‌ರವರ ಅಂದಾಜಿನ ಪ್ರಕಾರ ಆಸ್ತಿಪಾಸ್ತಿಗಳಿಗೆ ಆಗಿರುವ ನಷ್ಟ ಸುಮಾರು ಹತ್ತು ಕೋಟಿ ರೂಪಾಯಿಗಳಷ್ಟಾಗಿದ್ದು ಇದು 1881ರಲ್ಲಿ ಆಗಿನ ಮೈಸೂರು ಸರಕಾರದ ಒಟ್ಟು ಆಸ್ತಿಯ ಶೇ. 25ರಷ್ಟಾಗಿದೆ. ಬರಗಾಲದ ಮೊದಲ ವರ್ಷ 2,27,000 ಜನರಿಗೆ ಪರಿಹಾರ ಕೇಂದ್ರಗಳಲ್ಲಿ ಊಟ ಒದಗಿಸಿದ್ದು ಸುಮಾರು 60,000 ಜನರನ್ನು ಪರಿಹಾರ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲಾಯ್ತು. ವಾರ್ಷಿಕ ಕಂದಾಯ ವಸೂಲಿ 1875–76ರಲ್ಲಿ ರೂ. 109 ಲಕ್ಷಗಳಿದ್ದುದು 1876–77ರಲ್ಲಿ ರೂ. 82 ಲಕ್ಷಕ್ಕೆ ಇಳಿದು ಅದು 1877–78ರಲ್ಲಿ ರೂ. 69 ಲಕ್ಷಕ್ಕೆ ಕುಸಿಯಿತು. ಇದಕ್ಕೆ ಕಾರಣ ಸರ್ಕಾರ ಕರ ರಿಯಾಯಿತಿ ತೋರಿಸಿದ್ದಾಗಿರದೇ, ಬದಲಾಗಿ ಕಂದಾಯ ಕೊಡಲು ಜನರಲ್ಲಿ ಏನೂ ಉಳಿದಿರಲಿಲ್ಲ ಅಥವಾ ಕಂದಾಯ ಕೊಡಬೇಕಾಗಿದ್ದ ಎಷ್ಟೋ ಜನ ಬರಕ್ಕೆ ಆಹುತಿಯೇ ಆಗಿ ಹೋಗಿದ್ದರು.

ಬರ ಹೇಗೆ ಉಂಟಾಯಿತು?

ಬರಗಾಲ ಪರಿಸ್ಥಿತಿ ಉಂಟಾಗಲು ಪ್ರಕೃತಿಯ ವಿಕೋಪವೊಂದೇ ಕಾರಣವೇ ಅಥವಾ ಇದರ ಹಿಂದೆ ಮಾನವನ ಬಲವಾದ ಕೈವಾಡವೂ ಇತ್ತೆ? ಎಂಬುದನ್ನು ಪರಿಶೀಲಿಸೋಣ.

1799ರಲ್ಲಿ ಟಿಪ್ಪು ಸುಲ್ತಾನನ ಸೋಲಿನೊಂದಿಗೆ, ಮೈಸೂರಿನ 'ರಾಷ್ಟ್ರೀಯ' ಸರಕಾರವು ಅರೆ ಊಳಿಗಮಾನ್ಯ – ವಸಾಹತುಶಾಹಿ* ಸರಕಾರವಾಗಿ ಬದಲಾವಣೆಗೊಂಡಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಈ ಪ್ರದೇಶವನ್ನು ಸೂರೆ ಮಾಡುವಲ್ಲಿ ತನ್ನ ಹಕ್ಕನ್ನು ಸ್ಥಾಪಿಸಿ ಅದು ಸುಲಭಸಾಧ್ಯವಾಗುವಂತೆ ಮಾಡಲೋಸುಗ ಟಿಪ್ಪು ಸುಲ್ತಾನನ ಮೇಲೆ ಯುದ್ಧವನ್ನು ನಡೆಸಿತ್ತು. ಸೂರೆ ಮಾಡುವ ಮೊದಲ ರೀತಿಯೆಂದರೆ ರೈತರ ಮೇಲೆ ದುಬಾರಿ ಕರ ಹೇರಿದ್ದು. ಟಿಪ್ಪುವಿನ ಕಾಲದಲ್ಲಿ ರೈತರು ತಮ್ಮ **ಹೆಚ್ಚುವರಿಯ** 1/6 ಅಂಶದಷ್ಟನ್ನು ಸರಕಾರಕ್ಕೆ ಕಂದಾಯ ಕೊಡಬೇಕಾಗಿದ್ದುದಕ್ಕೆ ಬದಲಾಗಿ ಬ್ರಿಟಿಷರು **ಉತ್ಪಾದನೆಯ** 1/3 ಅಂಶವನ್ನು ಕೆಲವೊಮ್ಮೆ 1/2 ಅಂಶವನ್ನು ವಸೂಲಿ ಮಾಡ ತೊಡಗಿದರು. (ಗಮನಿಸಿ : ಟಿಪ್ಪುವಿನ ಕಾಲದಲ್ಲಿ ರೈತರ **ಹೆಚ್ಚುವರಿಯ** ಆರನೇ ಒಂದು ಭಾಗ; ಬ್ರಿಟಿಷರದು : ರೈತರ **ಉತ್ಪತ್ತಿಯ** ಮೂರನೇ ಒಂದು ಭಾಗ.) ಈ ಸುಲಿಗೆಯ ಒಂದು ಭಾಗ, ಅಂದರೆ 5 ಲಕ್ಷ ರೂಪಾಯಿಗಳನ್ನು ಆತನ **ವೈಯಕ್ತಿಕ** ಉಪಯೋಗಕ್ಕಾಗಿ ಮಹಾರಾಜನಿಗೆ ಕೊಡಲಾಗುತ್ತಿತ್ತು; ಉಳಿದುದನ್ನು ಜನವಿರೋಧಿ ಸರಕಾರಿ ಆಡಳಿತ ಯಂತ್ರವನ್ನು ನಡೆಸಲು ಉಪಯೋಗಿಸಲಾಗುತ್ತಿತ್ತು.

ಈ ದುಬಾರಿ ಕರ ಪದ್ಧತಿಯು ನೇರವಾಗಿ ರೈತಾಪಿಯನ್ನು ತುಳಿಯುತ್ತಿದ್ದುದಲ್ಲದೆ **ಪರೋಕ್ಷವಾಗಿ ರೈತರ ವೈಯಕ್ತಿಕ ಕೊಡುಗೆಗಳ ಮೇಲೆ ನಿಂತಿದ್ದ ಹಳ್ಳಿಗಳಲ್ಲಿನ ಸ್ಥಳೀಯ ಚಟುವಟಿಕೆಗಳನ್ನು ಹಾಳುಗೆಡವಿತು. ಕೆರೆಗಳನ್ನು ಕಟ್ಟಿ ಅವುಗಳನ್ನು ಉತ್ತಮ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವ ಕಾರ್ಯ ಅಂತಹ ಚಟುವಟಿಕೆಗಳಲ್ಲಿ ಒಂದಾಗಿತ್ತು.**

ಸೋರಿ ಹೋದ ಕೆರೆಗಳು

ಮೈಸೂರು ಪ್ರದೇಶವು ಕೆರೆ ನೀರಾವರಿಯನ್ನು ವ್ಯವಸ್ಥಿತವಾದ ರೀತಿಯಲ್ಲಿ ನಡೆಸಿಕೊಂಡು ಬಂದಿರುವುದು ಕಂಡುಬರುತ್ತದೆ. ಈ ಕೆರೆಗಳು ಎತ್ತರದ ಮೈದಾನಗಳಿಂದ ಸಾಗಿ ಬಂದ ನೀರನ್ನು ಹಿಡಿದಿಟ್ಟುಕೊಳ್ಳುತ್ತಿದ್ದವು. ಪ್ರತಿ ಕೆರೆಗೂ ತನ್ನದೇ ಆದ ಜಲಾನಯನ ಪ್ರದೇಶವಿದ್ದು, ಕೆರೆಯೊಂದು ಜಲಾವೃತವಾದ ಮೇಲೆ ಅಧಿಕವಾದ ನೀರು ಮತ್ತೊಂದು ಕೆರೆಗೆ ಹರಿದು ತುಂಬಿ ಕೊಳ್ಳುತ್ತಿತ್ತು. ಬ್ರಿಟಿಷ್ ಅಂಕಿ ಅಂಶಗಳ ಪ್ರಕಾರವೇ ಮೈಸೂರು ರಾಜ್ಯದಲ್ಲಿ 38.000 ಕ್ಕೂ ಹೆಚ್ಚು ಇಂತಹ ಕೆರೆಗಳಿದ್ದವು, ಅಥವಾ **ಪ್ರತೀ ಹಳ್ಳಿಗೂ ಸರಾಸರಿ ಎರಡು ಇಂತಹ ಕೆರೆಗಳು** ಇದ್ದವು! ಟಿಪ್ಪುವಿನ ಕಾಲದಲ್ಲೇ ವ್ಯವಸಾಯ ಯೋಗ್ಯ ಭೂ ಪ್ರದೇಶಗಳಲ್ಲಿ ಶೇ. 20ರಷ್ಟು ನೀರಾವರಿ ಇರುವ ಪ್ರದೇಶಗಳಾಗಿದ್ದವು. ಇಂದು ಆರು ಪಂಚವಾರ್ಷಿಕ ಯೋಜನೆಗಳ ನಂತರ ನೀರಾವರಿ ಇರುವ ಭೂಭಾಗವು ಒಟ್ಟು ವ್ಯವಸಾಯದ ಭೂಮಿಯ ಶೇ. 17ಕ್ಕೆ ಇಳಿದಿದೆ. ಇದು ಕಾಂಗ್ರೆಸ್–ಜನತಾ ಗಾಂಧಿ ಟೋಪಿಗಳ ಕೃಪೆ.

ಇಂದಿನ ಬರಗಾಲ ಪೀಡಿತ ಪ್ರದೇಶವಾದ ಕೋಲಾರ ಜಿಲ್ಲೆಯಲ್ಲೇ 4,000ಕ್ಕೂ ಹೆಚ್ಚು ಕೆರೆಗಳು ಇದ್ದು ಅದು 'ಕೆರೆಗಳ ಜಿಲ್ಲೆ' ಎಂದು ಕರೆಯಿಸಿಕೊಳ್ಳುತ್ತಿದ್ದುದು ಇಂದು ಊಹೆಗೂ ನಿಲುಕದ ವಿಷಯವಾದರೂ ಸತ್ಯ ಸಂಗತಿಯಾಗಿದೆ.

ಹೀಗೆ ಕೆರೆಗಳ ರಾಜ್ಯವಾಗಿದ್ದ ಮೈಸೂರು ರಾಜ್ಯದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆ ಆರಂಭವಾದ ಕೆಲವೇ ವರ್ಷಗಳೊಳಗೆ ಹೊಸ ಕೆರೆಗಳನ್ನು ಕಟ್ಟಲು ಮತ್ತು ಅಸ್ತಿತ್ವದಲ್ಲಿರುವ ಕೆರೆಗಳನ್ನು ದುರಸ್ತಿ ಪಡಿಸಲು ಹಾಗೂ ಅವುಗಳ ಕೆಸರು ತೆಗೆಯಿಸಲು ಹಣ ದೊರಕುತ್ತಿರಲಿಲ್ಲ. 1880ರ ಹೊತ್ತಿಗೆ ಒಟ್ಟು ನೀರಾವರಿ ಪ್ರದೇಶವು ಚುರುಕುಗತಿಯಲ್ಲಿ ಇಳಿಮುಖವಾಗತೊಡಗಿತು. 1870–71ರ ಹೊತ್ತಿಗೆ ಒಟ್ಟು ವ್ಯವಸಾಯದ ಭೂಮಿಯಲ್ಲಿ ಶೇ. 25 ರಷ್ಟು ಭೂಭಾಗದಲ್ಲಿ ಭತ್ತವನ್ನು ಬೆಳೆಯುತ್ತಿದ್ದರೆ 1874–75ರ ಹೊತ್ತಿಗೆ ಇದರಲ್ಲಿ ಶೇ. 10 ರಷ್ಟು ಇಳಿತ ಉಂಟಾಗಿರುವುದನ್ನು ಗಮನಿಸಿದರೆ ಮೇಲಿನ ಸಂಗತಿಯು ವೇದ್ಯವಾಗುತ್ತದೆ. ಅದೇ ಹೊತ್ತಿನಲ್ಲಿ, ಹಿಂದೆ ಭತ್ತ ಬೆಳೆಯುತ್ತಿದ್ದ ಪ್ರದೇಶದಲ್ಲಿ ನೀರಾವರಿಯ ಅಭಾವದಿಂದಾಗಿ ರಾಗಿಯನ್ನು (ಒಣ ಬೆಳೆ) ಬೆಳೆಯಬೇಕಾಗಿ ಬಂದುದರಿಂದ ಒಟ್ಟು ರಾಗಿ ಬೆಳೆಯುವ ಪ್ರದೇಶದಲ್ಲಿ ಶೇ. 66 07 ರಿಂದ ಶೇ. 77.06ಕ್ಕೆ ಹೆಚ್ಚಳ ಉಂಟಾಗಿರುವುದು ಕಂಡು ಬಂದಿದೆ

ತಾನು ಮಾಡುತ್ತಿರುವ ಕೊಳ್ಳೆಯ ಪ್ರತಿಕೂಲ ಪ್ರಭಾವ ಜನತೆಯ ಮೇಲೆ, ಮುಖ್ಯವಾಗಿ ಬಹುಸಂಖ್ಯಾತ ರೈತಾಪಿಯ ಮೇಲೆ ಆಗುತ್ತಿರುವುದು ಸರಕಾರಕ್ಕೆ ತಿಳಿದೇ ಇತ್ತು. ತನ್ನ ಜನಾನುರಾಗವನ್ನು ಕಾಪಾಡಿಕೊಳ್ಳಲು (ಇಂದು ಅವರ ಉತ್ತರಾಧಿಕಾರಿಗಳಾದ ನಮ್ಮ ಸರ್ಕಾರಗಳು ಮಾಡುತ್ತಿರುವಂತೆ) **ಕೆರೆಗಳನ್ನು ಪುನರ್ನಿರ್ಮಿಸಲು 1873ರಲ್ಲಿ ಶಾಸನಗಳನ್ನು ಹೊರಡಿಸಿತು. ಆದರೆ ಈ ಶಾಸನಗಳು ಉಪಯೋಗಹೀನವಾಗಿದ್ದವು.** ಹಲವು ವರ್ಷಗಳ ನಂತರ ಸರಕಾರವು ಕೆರೆ ಪಂಚಾಯತ್ ಮಸೂದೆ ಎಂಬ ಹೆಸರಿನ ಒಂದು ಮಸೂದೆಯನ್ನು ಪಾಸು ಮಾಡಿತು. ಕೆರೆಗಳ ನಿರ್ಮಾಣ ಕಾರ್ಯ ಮತ್ತು ಅವುಗಳ ಉಸ್ತುವಾರಿಯನ್ನು ಲೋಕೋಪಯೋಗಿ ಇಲಾಖೆಗೆ ಒಪ್ಪಿಸುವುದರ ಮೂಲಕ ಕೆಲವು ಬದಲಾವಣೆಗಳನ್ನು ಸರಕಾರ ಜಾರಿಗೆ ತಂದಿತು. **ಆದರೆ ಅಧಿಕಾರಿಗಳು ತಮ್ಮ ಜೇಬುಗಳನ್ನು ಸರಿಯಾಗಿ ತುಂಬಿಸಿಕೊಂಡ ನಂತರ ಕೆರೆಗಳ ಪುನರ್ನಿರ್ಮಾಣ ಕಾರ್ಯದಲ್ಲಿ ಸೋಲೊಪ್ಪಿಕೊಂಡರು.** ಈ ವಿಷಯದಲ್ಲಿ ಅಭ್ಯಾಸ ನಡೆಸಿ ವರದಿ ಒಪ್ಪಿಸುವಂತೆ ನೇಮಕಗೊಂಡ ಒಂದು ಸಮಿತಿಯು 1913ರಲ್ಲಿ ಕೊಟ್ಟ ವರದಿಯಲ್ಲಿ ಈ ರೀತಿ ಹೇಳಲಾಗಿದೆ — "ಒಟ್ಟು ಇದ್ದ 2,507 ಪ್ರಮುಖ ಕೆರೆಗಳಲ್ಲಿ (ಪ್ರತಿ ಕೆರೆಯೂ ಸುಮಾರು 500 ಎಕರೆ ಜಮೀನಿಗೆ ನೀರಾವರಿ ಒದಗಿಸಬಲ್ಲಂಥವು) 737 ದೊಡ್ಡ ಕೆರೆಗಳು ಇನ್ನೂ ಉಳಿದುಕೊಂಡಿದ್ದು ದುರಸ್ತಿ ಕಾದಿವೆ. ಅಲ್ಲದೇ 18,490 ಸಣ್ಣ ಕೆರೆಗಳು ಪುನರ್ನಿರ್ಮಾಣಗೊಳ್ಳಬೇಕಾದ ಪರಿಸ್ಥಿತಿಯಲ್ಲಿವೆ. **ಈವರೆಗೆ ದುರಸ್ತಿ ಕಾರ್ಯ ನಡೆಯುತ್ತಿರುವ ಗತಿಯಲ್ಲೇ ಸಾಗಿದರೆ ಇವುಗಳ ಪುನರ್ನಿರ್ಮಾಣ ನಡೆಸಲು 140 ವರ್ಷಗಳೇ ಬೇಕಾಗಬಹುದು.**"

ಪ್ರಕೃತಿಯ ಮೇಲೆ ನಮ್ಮ ಸಮಾಜವು ಯಾವ ಹಿಡಿತವನ್ನು ಸಾಧಿಸಿತ್ತೋ ಅದು ತಿರುವು–ಮುರುವು ಆದದ್ದಲ್ಲದೇ ಬ್ರಿಟಿಷ್ ಆಳ್ವಿಕೆಯ ದೆಸೆಯಿಂದಾಗಿ ಇಡೀ ವ್ಯವಸಾಯವೇ ಪ್ರಕೃತಿಯ ದಯೆಗೆ ಅಡಿಯಾಗುವಂತಾಯಿತು.

ಜನತೆಯ ಹಿತದ ಕಾಳಜಿಯಿಲ್ಲದ ಆಳುವ ವರ್ಗದ ಪಾಲಿಗೆ — ಅದು ವಿದೇಶಿ ಪ್ರಭುಗಳದಾಗಿರಲಿ ಅಥವಾ ಸ್ವದೇಶದವರದ್ದೇ ಆಗಿರಲಿ—ಯಾವಾಗಲೂ ತಮ್ಮ ಮಿತಿಯಿಲ್ಲದ ಲಾಭದ್ದೊಂದೇ ಗುರಿ. ದೇಶಕ್ಕೊದಗುವ ಘೋರ ದುರಂತಗಳು, ವಿಪತ್ತುಗಳನ್ನೂ ಸಹ ಇವರು ತಮ್ಮ ಲಾಭವನ್ನು ನೂರ್ಮಡಿ ಹೆಚ್ಚಿಸಿಕೊಳ್ಳುವ, ತಮ್ಮ ಹಿತಾಸಕ್ತಿಗಳನ್ನು ಬಲಪಡಿಸಿಕೊಳ್ಳುವ ಸಾಧನಗಳಾಗಿಯೇ ಬಳಸಿಕೊಳ್ಳುತ್ತಾರೆ. ಇದು ಅಂದಿನ ಬ್ರಿಟೀಷ್ ಮತ್ತಿತರ ವಿದೇಶೀ ಆಕ್ರಮಣಕಾರರು ಮತ್ತು ವಸಾಹತುಶಾಹಿಗಳಿಂದ ಹಿಡಿದು ಇಂದಿನ ರಾಜೀವ್, ಹೆಗಡೆ, ಎನ್‌ಟಿಆರ್, ಎಂಜಿಆರ್‌ಗಳವರೆಗೂ ನಮ್ಮ ಮುಖಕ್ಕೆ ರಾಚುವ ಸತ್ಯವಾಗಿದೆ.

ಕಾಫಿ ಬೆಳೆಗಾರರಿಗೆ ಪುಕ್ಕಟೆ ಕಾಡು ಜಮೀನು

ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಬ್ರಿಟಿಷರು ಕಾಫಿ ಕೃಷಿಯನ್ನು ಪ್ರಾರಂಭಿಸಿದ್ದು ಈ ಭೀಕರ ಕ್ಷಾಮ ತಲೆದೋರಲು ಇನ್ನೊಂದು ಮುಖ್ಯ ಕಾರಣ. ತನ್ನ ವಾಣಿಜ್ಯ ಹಿತಾಸಕ್ತಿಗಳನ್ನು ತಣಿಸಿಕೊಳ್ಳುವುದಕ್ಕಾಗಿ ಬ್ರಿಟಿಷ್ ಸರಕಾರವು 1870ರ ಮತ್ತು 80ರ ದಶಕಗಳಲ್ಲಿ ಮಲೆನಾಡು ವಲಯದಲ್ಲಿ ಕಾಫಿ ಬೆಳೆಗಾರರಿಗೆ ಎಲ್ಲಾ ರೀತಿಯ ರಿಯಾಯಿತಿಗಳನ್ನು ಕೊಡುವುದಾಗಿ ಬಹಿರಂಗವಾಗಿ ಘೋಷಿಸಿತು. ಯಾವುದೇ ವ್ಯಕ್ತಿಯು **ತನ್ನ ಮನಬಂದ ಕಾಡನ್ನು ಕಡಿದು ಅಲ್ಲಿ ಕಾಫಿಯನ್ನು ಬೆಳೆಯುವುದಾದರೆ ಆ ಜಾಗವನ್ನು ಉಚಿತವಾಗಿ ಆತನಿಗೆ ಆಸ್ತಿಯಾಗಿಯೇ ನೀಡುವುದಾಗಿ** ಸಾರಿತು. ಇದರ ಮೇಲೆ ಕಾಫಿ ಬೆಳೆಗಾರರಿಗೆ ಹಲವು ವಿಧದ ತೆರಿಗೆ ವಿನಾಯಿತಿಗಳನ್ನು ಕೊಡಲಾಯ್ತು. ಹಲವು ಆಂಗ್ಲರು ಮತ್ತು ಅನೇಕ ಭಾರತೀಯರಿಗೆ ಇದೊಂದು ಸುಸಂದರ್ಭವಾಯಿತು. ನೂರಾರು ಎಕರೆ ದಟ್ಟ ಕಾಡುಗಳು ನೆಲಸಮವಾದವು. ಹೀಗೆ ಈ ಪ್ರದೇಶದಲ್ಲಿ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಪರಿಸರದ ಸಮತೋಲನ ತಪ್ಪಿದುದಲ್ಲದೇ ಮಲೆನಾಡು ಮತ್ತು ಬಯಲುಸೀಮೆ ಪ್ರದೇಶಗಳ ನಡುವಣ ಪರಿಸರ ಸಂಬಂಧಗಳ ಮೇಲೂ ಇದರ ಪರಿಣಾಮ ಉಂಟಾಯಿತು.

ಇವಿಷ್ಟು, ನೈಸರ್ಗಿಕ ವಿಪತ್ತಿಗೆ ಮನುಷ್ಯನು ಹೇಗೆ ಕಾರಣನಾದನು ಎಂಬುದಕ್ಕಾದರೆ, ವಸಾಹತುಶಾಹಿ ಮತ್ತು ಅದರ ಕಿರಿಯ ಪಾಲುದಾರರಾದ ಮೈಸೂರ ಒಡೆಯರು ಈ ವಿಪತ್ತಿನಿಂದಾದ ಜನರ ಬವಣೆಗೆ ಯಾವ ತರದಲ್ಲಿ ಓಗೊಟ್ಟರು ಎಂಬುದು ಅಷ್ಟೇ ಮುಖ್ಯವಾಗಿದೆ.

ಫಸಲು ಕೈಕೊಟ್ಟಾಗಲೂ ಭಾರೀ ಸುಗ್ಗಿ

ಆಳುವ ವರ್ಗಗಳು ಸಮಾಜದಲ್ಲಿ ಉಂಟಾಗುವ ಯಾವುದೇ ಬಿಕ್ಕಟ್ಟು ಪರಿಸ್ಥಿತಿಯ (ಅದು ತಾವಾಗಿಯೇ ಉಂಟುಮಾಡಿದ ಬಿಕ್ಕಟ್ಟಾಗಿರಬಹುದು) ಪೂರ್ಣ ಪ್ರಯೋಜನ ಪಡಕೊಳ್ಳುತ್ತಾರೆ ಎಂಬುದು ಮಾರ್ಕ್ಸ್ ವಾದಿಗಳ ಸಾಮಾನ್ಯ ಮತ. ಇದು ಮೈಸೂರು ರಾಜ್ಯದಲ್ಲಿ ಕ್ಷಾಮಕಾಲದಲ್ಲಿ ಬ್ರಿಟಿಷ್ ಸರಕಾರವು ಜನರೊಂದಿಗೆ

(4ನೇ ಪುಟಕ್ಕೆ)

ಬರಗಾಲ — ಏಕೆ ಮತ್ತು ಹೇಗೆ ?

(3ನೇ ಪುಟದಿಂದ)

ಹೇಗೆ ನಡೆದುಕೊಂಡಿತು ಎಂಬುದರಲ್ಲಿ ಚೆನ್ನಾಗಿ ಸಾಬೀತಾಗಿದೆ. ದೇಶದ ಸಂಪತ್ತನ್ನು ಕೊಳ್ಳೆಹೊಡೆಯಲು ಮತ್ತು ಜನರ ಮೇಲಿನ ತನ್ನ ಹಿಡಿತವನ್ನು ಭದ್ರಮಾಡಲು ವಸಾಹತುಶಾಹಿಯು ಈ ತಂತ್ರವನ್ನು ಎಲ್ಲಾ ರೀತಿಯಲ್ಲಿ ಬಳಸಿಕೊಂಡಿತು.

ಪರಿಹಾರ ಕಾರ್ಯದಲ್ಲಿ ಉದ್ಯೋಗ ಕಲ್ಪಿಸಿಕೊಡಲಾದ 60,000 ಜನರಲ್ಲಿ ಮೂರನೇ ಒಂದರಷ್ಟು ಜನರನ್ನು ರೈಲ್ವೆದಾರಿಗಳನ್ನು ನಿರ್ಮಿಸುವ ಕೆಲಸದಲ್ಲಿ ತೊಡಗಿಸಲಾಯಿತು. ಈ ರೈಲು ದಾರಿಗಳು ನಾಡಿನ ಸಕಲ ಸಂಪತ್ತನ್ನೂ ಸೂರೆ ಮಾಡಿ ಹೊರಕ್ಕೆ ಸಾಗಿಸುವುದಕ್ಕೂ, ಬ್ರಿಟಿಷ್ ಬಂಡವಾಳಶಾಹಿಗಳಿಗೆ ತಮ್ಮ ಮಾಲುಗಳನ್ನು ದೇಶೀ ಮಾರುಕಟ್ಟೆಗೆ ತಂದು ತಮ್ಮ ಹೊಟ್ಟೆಯನ್ನು ಬೆಳೆಸಿಕೊಳ್ಳುವುದಕ್ಕೂ ಸಹಾಯಕವಾದವು. ಅಸಾಧಾರಣ ತೆರಿಗೆ ಕಂದಾಯಗಳ ಜೊತೆಗೆ ಈ ದ್ವಿಮುಖ ಲೂಟಿ!

ಎರಡನೆಯದಾಗಿ, ಬರಗಾಲದಿಂದಾಗಿ ಆ ಪ್ರದೇಶಗಳ ಕೃಷಿ ಕಾರ್ಮಿಕರು ಮಾತ್ರವಲ್ಲ ಜಮೀನುಳ್ಳ ರೈತರು ಕೂಡ ಸೇರಿದಂತೆ ಅಪಾರ ಸಂಖ್ಯೆಯ ಜನ ಉದ್ಯೋಗರಹಿತರಾಗಿ, ಉದ್ಯೋಗ ಹುಡುಕಿಕೊಂಡು ಅವರೆಲ್ಲ ಕಾಫಿ ತೋಟಗಳಿಗೆ ವಲಸೆ ಬರುವಂತಾಯಿತು. ಹೀಗೆ, ಕಾಫಿ ತೋಟಗಳಲ್ಲಿ ದುಡಿಯಲು ಬೇಕಾಗಿರುವ ಕಾರ್ಮಿಕ ಬಲವನ್ನು ಹೇಗೆ, ಎಲ್ಲಿಂದ ತರುವುದೆಂದು ಸರ್ಕಾರ ಯೋಚಿಸುತ್ತಿರುವಷ್ಟರಲ್ಲಿಯೇ ಬಂದ ಈ ಬರಗಾಲವು ಅವರ ಸಮಸ್ಯೆಗೆ ಪರಿಹಾರ ನೀಡಿತು. 1881ರ ಹೊತ್ತಿಗೆ ಈ ಕಾಫಿ ತೋಟಗಳಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಮಂದಿ ಕೂಲಿ ಮಾಡುತ್ತಿದ್ದರು. ಇದು ಬ್ರಿಟಿಷರಿಗೆ ದಕ್ಕಿದ ಜಯವೆಂದೇ ಹೇಳಬೇಕು.

ಇಷ್ಟೇ ಅಲ್ಲದೆ ಬರಗಾಲದಿಂದಾಗಿ ರೈತರು ಕೇವಲ ತಮ್ಮ ಜೀವ ಉಳಿಸಿಕೊಳ್ಳುವ ಸಲುವಾಗಿ ತಮ್ಮ ಹಳ್ಳಿಗಳನ್ನು ತೊರೆದು ಈ ಕಾಫಿ ತೋಟಗಳಲ್ಲಿ 'ಸ್ವ ಇಚ್ಛೆ'ಯಿಂದಲೇ ನೆಲೆಯೂರಬೇಕಾದುದರಿಂದಲೂ, ಹೆಚ್ಚುವರಿ ಕಾರ್ಮಿಕ ಬಲದಿಂದಾಗಿಯೂ ಅವರ ಕೂಲಿಯ ಬೆಲೆಯೂ ಇತಿಮಿತಿ ಇಲ್ಲದಷ್ಟು ಕಡಿಮೆಯಾದುದರಿಂದ ಮಾಲೀಕರಿಗೆ ದ್ವಿಗುಣ ಲಾಭ ದೊರಕುವಂತಾಯಿತು.

ಜನರನ್ನು ಕಾಫಿ ತೋಟದಲ್ಲಿ ಕೆಲಸ ಮಾಡಲು ಹೇಗೆ ಪುಸಲಾಯಿಸಿ ಇಲ್ಲವೇ ಬಲಾತ್ಕಾರದಿಂದ ಕೊಂಡೊಯ್ಯಲಾಯಿತು ಎಂಬುದಕ್ಕೆ ಮನ ಮಿಡಿಯುವ ನಿದರ್ಶನಗಳಿವೆ. ಬಯಲು ಸೀಮೆಯ ಬೆಚ್ಚಗಿನ ಹವಾಮಾನಕ್ಕೆ ಒಗ್ಗಿ ಹೋಗಿದ್ದ ರೈತರಿಗೆ, ಕಾರ್ಮಿಕರಿಗೆ ಮಲೆನಾಡಿನ ತೇವಪೂರಿತ ವಾತಾವರಣಕ್ಕೆ ಹೊಂದಿಕೊಳ್ಳುವುದು ಸಾಧ್ಯವಾಗಲಿಲ್ಲ. ಇದರಿಂದಾಗಿ ನೂರಾರು ಕಾರ್ಮಿಕರು ಮಲೇರಿಯಾ ರೋಗಕ್ಕೆ ತುತ್ತಾದರು. ಸಾವಿರಾರು ಜನರು ತಮ್ಮ ಕುಟುಂಬಗಳಿಂದ ದೂರವಾದರು. ಇನ್ನೂ ಲೆಕ್ಕವಿಲ್ಲದಷ್ಟು ಮಂದಿ ಕಾಫಿ ತೋಟಗಳಿಂದ ತಪ್ಪಿಸಿಕೊಂಡು ಹೋಗುವ ಪ್ರಯತ್ನದಲ್ಲಿ ಬ್ರಿಟಿಷ್ ಮಾಲೀಕರ ಗುಂಡೇಟಿಗೆ ಬಲಿಯಾದರು. ಇಲ್ಲವೇ ತಪ್ಪಿಸಿಕೊಂಡಾಗ್ಯೂ ಆಹಾರ ದೊರಕದೇ ಮಧ್ಯದಾರಿಯಲ್ಲೇ ಅಸುನೀಗಿದರು. ಇತ್ತ ತೋಟಗಳಲ್ಲೂ ಸಹ ಮೇಲೆ ಹೇಳಿದ ಕಾರಣದಿಂದಾಗಿ ಕೂಲಿಯ ದರ ಅತಿ ಕಡಿಮೆಯಾದುದರಿಂದ ಕೂಡ ಕಾರ್ಮಿಕರು ಸತ್ತು – ಕೆಟ್ಟು ಕಂಗೆಟ್ಟರು.

ಬರಗಾಲದ ಪ್ರದೇಶಗಳಲ್ಲಿ ಮಾಲೀಕರು ಇರಿಸಿಕೊಳ್ಳಲು ಅಶಕ್ಯರಾದ ಫಲವಾಗಿ ನೂರಾರು ಜೀತದಾಳುಗಳು ಜೀತವಿಮುಕ್ತಿ ಪಡೆದರೂ ಕಂದು ಬಣ್ಣದ ಯಜಮಾನನ ಬದಲಾಗಿ ಬಿಳಿಯ ಯಜಮಾನನ ಆಳಾಗಿ ಕಾಫಿ ತೋಟದಲ್ಲಿ ದುಡಿಯುವ ಕೂಲಿಯಾಳುಗಳಾಗಿ ಸೇರಿಕೊಳ್ಳಬೇಕಾಯಿತು.

ಮೂರನೆಯದಾಗಿ, ಮೈಸೂರು ಸಂಸ್ಥಾನದ ಕಂದಾಯ ವಸೂಲಿಯಲ್ಲಿ ಇಳಿತ ಉಂಟಾದುದರಿಂದ ಈ ಅವಕಾಶವನ್ನು ಉಪಯೋಗಿಸಿಕೊಂಡು ಬ್ರಿಟಿಷರು ರಾಜ್ಯ ಸರಕಾರಕ್ಕೆ 1878ರಲ್ಲಿ ಒಂದು ಸಾಲವನ್ನು ಮಂಜೂರು ಮಾಡಿದರು. ಬರಗಾಲದ ದೆಸೆಯಿಂದಾಗಿ ರಾಜ್ಯ ಖಜಾನೆಯು ಬರಿದಾದುದರಿಂದ ಈ ಹಣವನ್ನು ರಾಜ್ಯವು ಬ್ರಿಟಿಷ್ ಭಾರತ ಸರಕಾರಕ್ಕೆ ಮರುಪಾವತಿ ಮಾಡುವುದು ಸಾಧ್ಯವಾಗಲಿಲ್ಲ. ವಾರ್ಷಿಕ ಶೇ. 5ರ ಬಡ್ಡಿಯನ್ನು ಕೊಡುವುದಾದರೆ ಈ ಸಾಲದ ಮರುಪಾವತಿ ಅವಧಿಯನ್ನು ಮುಂದಕ್ಕೆ ಹಾಕುವುದಾಗಿ ನೀಚ ಬ್ರಿಟಿಷ್ ಸರಕಾರವು ಶರತ್ತು ಹಾಕಿತು. ಆ ದಿನದಿಂದ ಮೈಸೂರು ರಾಜ್ಯದ ಪ್ರಜೆಗಳು 'ಭಾರತ' ಸರಕಾರಕ್ಕೆ ಬಾಕಿದಾರರಾದುದಲ್ಲದೇ ಆ ಅಪಮಾನ ಸಂಬಂಧವು ಇಂದಿನವರೆಗೂ ಮುಂದುವರಿದು ಬಂದಿದೆ.

ನಾಲ್ಕನೆಯದಾಗಿ, ತನ್ನ ಬೊಕ್ಕಸವನ್ನು ತುಂಬಿಸುವ ತರಾತುರಿಯಲ್ಲಿ ಹಾಗೂ ಜನರನ್ನು ನಿರ್ವೀರ್ಯರನ್ನಾಗಿ ಮಾಡಿ ಅವರನ್ನು ಅಮಲಿನಲ್ಲಿ ಮುಳುಗಿಸಿ ಅವರ ಆತ್ಮಬಲವನ್ನು ಕುಂದಿಸುವ ಸಲುವಾಗಿ ಸರಕಾರವು ಮದ್ಯದ ಮಾರಾಟಕ್ಕೆ ಎಲ್ಲಿಲ್ಲದ ಉತ್ತೇಜನ ಕೊಡತೊಡಗಿತು. ಇಲ್ಲದೇ ಹೋದಲ್ಲಿ ಸರಕಾರದ ಮತ್ತೆ ಅದರ ಬಾಲಬಡುಕ ಮೈಸೂರು ರಾಜನ ಮತ್ತು ಅವನ ಆಡಳಿತಶಾಹಿಯ ಹಾಗೂ ಉಳಿಗಮಾನ್ಯ ಪಟುಗಳ ಅಕ್ಷಮ್ಯ ಅಪರಾಧಗಳಿಂದ ರೋಸಿ ಹೋದ ಜನರು ದಂಗೆ ಏಳುವುದು ಖಚಿತವಿತ್ತು. ಟಿಪ್ಪುವಿನ ಕಾಲದಲ್ಲಿ ಮದ್ಯ ಮಾರಾಟ ಮತ್ತು ಸೇವನೆಯ ಮೇಲೆ ಇದ್ದ ನಿಷೇಧವನ್ನು ಬ್ರಿಟಿಷ್ ಸರಕಾರ ದುರುದ್ದೇಶದಿಂದ ತೆಗೆದು ಹಾಕಿತು. 1881ರಲ್ಲಿ ಮದ್ಯದ ಮಾರಾಟದಿಂದ ಬಂದ ಕಂದಾಯವು ಸುಮಾರು 10.5 ಲಕ್ಷ ರೂಪಾಯಿಗಳಿದ್ದು, ಅದು ರಾಜ್ಯದ ಒಟ್ಟು ಕಂದಾಯ ಸಂಗ್ರಹದ 1/6 ಭಾಗವಾಗಿತ್ತು. 1881ರಲ್ಲಿ ಮದ್ಯ ಮಾರಾಟವು ಶಿಖರವನ್ನು ಮುಟ್ಟಿದ್ದು ಅಂದಿನಿಂದ ಇಂದಿನವರೆಗೆ ಪ್ರತಿ ಬಿಕ್ಕಟ್ಟು ಪರಿಸ್ಥಿತಿಯಲ್ಲಿಯೇ (ಶ್ರಮಜೀವಿಗಳು ಕುಡಿದು ತಮ್ಮ ನೋವನ್ನು ಮರೆಯಲು ಪ್ರಯತ್ನಿಸುವುದನ್ನು ಸರಕಾರ ಬಯಸುತ್ತಿರುವಾಗ) ಮದ್ಯಸೇವನೆಯಲ್ಲಿ ಗಮನಾರ್ಹ ಹೆಚ್ಚಳವನ್ನು ಕಾಣಬಹುದಾಗಿದೆ.

ಮೊದಲ ಬರಗಾಲ ಬಂದ ನಲವತ್ತು ವರ್ಷಗಳ ನಂತರ

1918ರಲ್ಲಿ ರಾಜ್ಯಕ್ಕೆ ಬಡಿದ ಎರಡನೇ ಕ್ಷಾಮದ ಪರಿಣಾಮವು ಕೂಡ ಮೊದಲನೆ ಬರಗಾಲದಷ್ಟೇ ಭೀಕರ ಸ್ವರೂಪದ್ದಾಗಿದ್ದು ರೈತರ ಪಾಲಿಗೆ ವಿನಾಶಕಾರಿಯಾಗಿತ್ತು. ಅಲ್ಲದೇ ರಾಜ್ಯದ ಜನಸಂಖ್ಯೆಯ ಶೇ. 3 ಭಾಗ ಅಂದರೆ ಸುಮಾರು ಎರಡೂವರೆ ಲಕ್ಷ ಜನರನ್ನು ಬಲಿ ತೆಗೆದುಕೊಂಡಿತು. ಇಡೀ ದಕ್ಷಿಣ ಭಾರತಕ್ಕೂ ತಾಕಿ ಒಟ್ಟು ಸುಮಾರು 6,50,000 ಜನರನ್ನು ಬಲಿ ತೆಗೆದುಕೊಂಡಿತು. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ 1918ರಲ್ಲಿ ತಲೆದೋರಿದ ಕ್ಷಾಮದಿಂದ ತತ್ತರಿಸಿದ ಕಾರ್ಮಿಕರು ಮತ್ತು ಕುಶಲಕರ್ಮಿಗಳು ತಮ್ಮ ಸ್ವಂತ ಸಶಸ್ತ್ರ ಪಡೆಗಳನ್ನು ಕಟ್ಟಿಕೊಂಡು ಗೋಡನ್‌ಗಳಲ್ಲಿ ಬಚ್ಚಿಟ್ಟ ಆಹಾರ ಸಾಮಗ್ರಿಗಳನ್ನು ವಶಪಡಿಸಿಕೊಂಡರು. ಹಳ್ಳಿಗಳಿಗೂ 5ರಿಂದ 7 ಜನಗಳ ತಂಡಗಳಲ್ಲಿ ನುಗ್ಗಿ ಗೋಡನ್ನುಗಳಲ್ಲಿ ಬಚ್ಚಿಟ್ಟಿದ್ದ ಆಹಾರ ಧಾನ್ಯಗಳನ್ನು ವಶಪಡಿಸಿಕೊಂಡ ಈ ಪಡೆಗಳಲ್ಲಿ ಹೊಲೆಯರು, ಮಾದಿಗರು ಹಾಗೂ ನೇಯ್ಗೆಯವರೂ ಇದ್ದರು. ಕಳ್ಳ ಮಾರಾಟಗಾರರು ಮತ್ತು ಕಳ್ಳ ದಾಸ್ತಾನುಗಾರರ ಅಂಗಡಿಗಳಿಗೆ ನುಗ್ಗಿ ಸರಕುಗಳನ್ನು ನೋಡಿ ಉಳಿದವರಿಗೆ ಸೂಚನೆ ಕೊಟ್ಟರು.

ಈ ಕ್ರಮಗಳಿಂದ ಜನರು ತಮ್ಮದೇ ಆದ ರೀತಿಯಲ್ಲಿ ಇಂಥ ಬಿಕ್ಕಟ್ಟು ಪರಿಸ್ಥಿತಿಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದರು. ಬ್ರಿಟಿಷ್ ಆಡಳಿತದ ಅವಧಿಯಲ್ಲಿ ನಡೆದ ಇಂತಹ ಘಟನೆಗಳಿಂದಾಗಿ ಇಂಗ್ಲಿಷ್ ಭಾಷೆಯಲ್ಲಿ 'Loot' (ಲೂಟಿ) ಎಂಬ ಪದ ಬಳಕೆಗೆ ಬಂತು.

1877ರ ಮಹಾಕ್ಷಾಮಕ್ಕೆ ಇದ್ದಂಥವೇ ಕಾರಣಗಳು ಇದರ ಹಿಂದೆಯೂ ಕೆಲಸ ಮಾಡಿದ್ದು ಸೋಜಿಗವಲ್ಲ. ಇಲ್ಲೂ ಕೂಡ ಸಾಮ್ರಾಜ್ಯಶಾಹಿಯು ತನ್ನ ಕ್ರೂರ, ಕಪಟ ತಂತ್ರಗಳಿಂದ ಜನರ ಸುಲಿಗೆಯನ್ನು ಮುಂದುವರಿಸಿಕೊಂಡು ಬರವನ್ನು ಸ್ವಪ್ರಯೋಜನಕ್ಕೆ ಬಳಸಿಕೊಂಡ ರೀತಿ ಯಾವ ರೀತಿಯಲ್ಲೂ ಬೇರೆಯಾಗಿರಲಿಲ್ಲ. ಆದರೆ ಈ ಬಾರಿ ಮಾತ್ರ ಆಹಾರ ಧಾನ್ಯಗಳ ಬೆಲೆಯು ಮೈಸೂರು, ಬೆಂಗಳೂರು ಪಟ್ಟಣಗಳಲ್ಲಿ ಕೇವಲ ಒಂದು ವರ್ಷದ ಅವಧಿಯಲ್ಲಿ ಶೇಕಡಾ 150ರಷ್ಟು ಹೆಚ್ಚಾದುದರಿಂದ ವರ್ತಕರು ಸರಿಯಾದ ಲಾಭ ಪಡೆದುಕೊಂಡರು. ಕಳ್ಳ ದಾಸ್ತಾನುಗಾರರು ಮತ್ತು ಕಳ್ಳಮಾರುಕಟ್ಟೆಯವರ ಜೊತೆಗೆ ಹೇಗೆ ಶಾಮೀಲಾಗಿ ಲಾಭ ಪಡೆಯಬೇಕೆಂಬುದನ್ನು ಆಡಳಿತಶಾಹಿಯ ಅಧಿಕಾರಿಗಳು ಈ ಬಾರಿ ಸರಿಯಾಗಿ ಕಲಿತುಕೊಂಡರು. ಅಲ್ಲದೇ ಈ ಬಾರಿ ಸಾಮ್ರಾಜ್ಯಶಾಹಿಗಳ ನಡುವಿನ ಯುದ್ಧಕ್ಕಾಗಿ ಮತ್ತು ಅದರ ಉದ್ದಿಮೆಗಳಿಗೆ ಬೇಕಾದ ಕಚ್ಚಾಮಾಲುಗಳಿಗಾಗಿ ಕಾಡಿನ ಸಂಪತ್ತು ಲೂಟಿಯಾಗಿ ಕಾಡುಗಳ ವಿನಾಶವಾಯಿತು.

❖ ❖ ❖

ಇಂದು ರಾಮಕೃಷ್ಣ ಹೆಗಡೆಯವರ ಆಳ್ವಿಕೆಯಲ್ಲಿಯೂ ಈ ಎಲ್ಲಾ ಕಾರಣಗಳು ಬರಗಾಲ ಪರಿಸ್ಥಿತಿಗೆ ಮೂಲವಾಗಿವೆ ಮತ್ತು ಈ ಹಿಂದೆ ಕಲಿತ ಪಾಠಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ಜನರ ಕಣ್ಣಿಗೆ ಮಣ್ಣೆರಚಲು ನರಿ ಬುದ್ಧಿಯ ನೌಕರಶಾಹಿಗಳಿಗೂ ಮತ್ತು ಅವರ ರಕ್ಷಕರಾದ ಕಪಟ ರಾಜಕಾರಣಿಗಳಿಗೂ ಸಾಧ್ಯವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಒಟ್ಟು ಅರಣ್ಯ ಭಾಗವು 1947ರಲ್ಲಿ ಶೇಕಡಾ 88 ಇದ್ದುದು ಇಂದು ಕೇವಲ ಶೇ. 23ಕ್ಕೆ ಇಳಿದಿದೆ. ನಮ್ಮ ದೇಶದ ಇತರೆಡೆಗಳ ಪರಿಸ್ಥಿತಿಯೂ ಇದಕ್ಕಿಂತ ಉತ್ತಮವೇನಲ್ಲ—ಇನ್ನೂ ಕಳಪೆಯೇ. ಒಂದು ಕಾಲದಲ್ಲಿ 'ಕೆರೆಗಳ ಜಿಲ್ಲೆ' ಎಂದು ಕರೆಯಿಸಿಕೊಳ್ಳುತ್ತಿದ್ದ ಕೋಲಾರವು ಇಂದು ಬರದ ಭೂಮಿಯಾಗಿದೆ. 1980ರ ತನಕದ 10 ವರ್ಷಗಳ ಅವಧಿಯಲ್ಲಿ ಕೋಲಾರ ಜಿಲ್ಲೆಯಲ್ಲಿ ರಾಗಿ ಬೆಳೆಯಲ್ಲಿ ಮೂರು ಪಟ್ಟು ಕುಸಿತ ಉಂಟಾಗಿದ್ದು ಇದಕ್ಕೆ ಕಾರಣ **ರಾಗಿ ಬೆಳೆಯುವ ಪ್ರದೇಶಗಳಲ್ಲಿ ಇಂದು ನೀಲಗಿರಿ ಬೆಳೆಯಲಾಗುತ್ತಿರುವುದು.** ಕೋಲಾರದ ಒಣಗಿದ ಕೆರೆಗಳ ತೀರದಲ್ಲಿ ಹಾಕಲಾದ ನೀಲಗಿರಿ ಸಸಿಗಳು ವಿಶ್ವ ಬ್ಯಾಂಕಿನ ಪೋಷಣೆಯಿಂದಾಗಿ ಇಂದು ಹೆಮ್ಮರಗಳಾಗಿ ಬೆಳೆದು ನಿಂತಿವೆ. ಈ ಉದ್ದೇಶಕ್ಕೆಂದೇ ರಾಜ್ಯ ಅರಣ್ಯ ಇಲಾಖೆಯಿಂದ ಸ್ಥಾಪಿತವಾದ ಪ್ಲಾಂಟೇಶನ್ ಕಾರ್ಪೋರೇಶನ್ ಸಾಮ್ರಾಜ್ಯಶಾಹಿಗಳ ಮತ್ತು ಭಾರೀ ಬೂರ್ಜ್ವಾಗಳ* ಹಿತಾಸಕ್ತಿಗೆ ಅನುಗುಣವಾಗಿ ನೀಲಗಿರಿ ಸಸಿಗಳನ್ನು ನೆಟ್ಟು ಬೆಳೆಸಿ ಅವುಗಳನ್ನು ಹರಿಹರದಲ್ಲಿರುವ ಬಿರ್ಲಾನ ಪಾಲಿಫೈಬರ್ ಕಾರ್ಖಾನೆಗೆ ಕಳುಹಿಸುವುದರೊಂದಿಗೆ ದೊಡ್ಡ ದಳ್ಳಾಳಿ ಬಂಡವಾಳಶಾಹಿಗಳ* ಸೇವೆ ಮಾಡುತ್ತಿದೆ.

(5ನೇ ಪುಟಕ್ಕೆ)

ಮನುಷ್ಯನ ಜೀವನ ಪ್ರಕೃತಿಯೊಂದಿಗೆ ಹಾಸುಹೊಕ್ಕಾಗಿದೆ ಆದ್ದರಿಂದ ಪ್ರಕೃತಿಯ ಮೇಲೆ ಅವಲಂಬನೆ ಮನುಷ್ಯನಿಗೆ ಅನಿವಾರ್ಯ. ಆದರೆ ಅದು ಈಗಿನಂತೆ ಪ್ರಕೃತಿಯ 'ಇಚ್ಛೆ'ಗೆ ಅಡಿಯಾಳಾಗಿರುವಂಥ ಪರಿಸ್ಥಿತಿಯಾಗ ಬೇಕಾಗಿಲ್ಲ. ಉದಾಹರಣೆಗೆ, ಮಳೆ ಹೆಚ್ಚಾದರೆ ನೀರು ಕೆರೆಗಳಲ್ಲಿ, ಅಣೆಕಟ್ಟುಗಳಲ್ಲಿ (ಅವೆಲ್ಲ ಸುಸ್ಥಿತಿಯಲ್ಲಿದ್ದು) ಶೇಖರವಾಗುವ, ಮಳೆ ಕಮ್ಮಿಯಾದಾಗ ಈ ಶೇಖರವಾದ ನೀರನ್ನು ಬಳಸಿಕೊಳ್ಳುವ, ಒಂದು ರೀತಿಯ ಸಮತೋಲನ; ಇತ್ತ ಪ್ರಕೃತಿಯಲ್ಲೂ ಅರಣ್ಯಗಳು, ಜನಸಾಂದ್ರತೆ, ನೀರಿನ ಮೂಲಗಳು ಈ ಎಲ್ಲ ಬಾಬತ್ತುಗಳಲ್ಲಿ ಸಮತೋಲನವಿದ್ದು, ವಿನಾಕಾರಣ ಮಳೆ, ಚಳಿ, ಮತ್ತಿತರ ಹವಾಮಾನ ಪರಿಸ್ಥಿತಿಗಳು ಏರುಪೇರಾಗದಿರುವುದು; ಕಾಡು ಪ್ರಾಣಿಗಳು, ಅಸಂಖ್ಯ ಜಾತಿಯ ಕೀಟಗಳು, ರೋಗಾಣುಗಳು ಮುಂತಾದುವುಗಳಲ್ಲೂ ನೈಸರ್ಗಿಕ ಸಮತೋಲನವಿದ್ದು, ಅವುಗಳಿಂದ ಮನುಷ್ಯನ ಜೀವನಕ್ಕೆ ತಡೆಯಲಸಾಧ್ಯವಾದ ಉಪಟಳವಾಗದಿರುವುದು — ಇವೆಲ್ಲ ಮನುಷ್ಯ ಮತ್ತು ಪ್ರಕೃತಿಯ ನಡುವಿರುವ ದಾಸ್ಯವಲ್ಲದ, ಒಂದು ರೀತಿ ಸಮಾನತೆಯ ಅವಲಂಬನೆ.

ಆದರೆ ಇಂದು ಈ ಎಲ್ಲಾ ವಿಧದ ಸಮತೋಲನ ತಪ್ಪಿದೆ. ಇದಕ್ಕೆ ಕಾರಣ ದುರಾಶೆ–ಶೋಷಕ ಪ್ರವೃತ್ತಿಗಳ ನಮ್ಮ ಆಳುವ ವರ್ಗಗಳು. ಉದಾ: ವ್ಯಾಪಕ ಅರಣ್ಯನಾಶ, ನದಿ, ಸಮುದ್ರ, ವಾತಾವರಣಗಳು ಕಲುಷಿತಗೊಳ್ಳುವುದು – ಇವೆಲ್ಲ ಯಾರಿಗಾಗಿ?

ಓದುಗರ ಪತ್ರ

ರಸ್ತೆ ಸೌಕರ್ಯ ಇಲ್ಲದ್ದಕ್ಕೆ ಜಿಲ್ಲಾ, ಮಂಡಲ ಚುನಾವಣೆಗಳಿಗೆ ಹಳ್ಳಿಗರ ಬಹಿಷ್ಕಾರ ಬೆದರಿಕೆ

ಮಾನ್ಯರೆ,

ಹರಿಹರಪುರ-ಆಗುಂಬೆ ರಸ್ತೆಯ ಶಾನುವಳ್ಳಿಯಿಂದ ಒಂದೂವರೆ ಕಿ. ಮೀ. ದೂರದಲ್ಲಿ ದುರ್ಗಮವಾದ ಬೆಟ್ಟ-ಗುಡ್ಡಗಳ ನಡುವೆ ಇರುವ ಹುಲುಗಾರಿನಲ್ಲಿ 7-8 ಕುಟುಂಬಗಳು, ಅಲ್ಲಿಂದ 1 ಕಿ. ಮೀ. ಮುಂದೆ ಹಸಿರುಕೊಡಿಗೆಯಲ್ಲಿ ಸುಮಾರು 25-30 ಅತಿಸಣ್ಣ ಹಿಡುವಳಿದಾರರ ಕುಟುಂಬಗಳು, ಅಲ್ಲಿಂದಲೂ 1 ಕಿ. ಮೀ. ದೂರದಲ್ಲಿ ಹಿರೇಹುಲಗಾರಿನಲ್ಲಿ 15 ಗಿರಿಜನ ಕುಟುಂಬಗಳು ವಾಸವಾಗಿದ್ದು, ಈ ಊರುಗಳಿಗೆ ಒಂದು ರಸ್ತೆ ಸಂಪರ್ಕ ಕಲ್ಪಿಸಿಕೊಡುವಂತೆ ಹಲವಾರು ವರ್ಷಗಳಿಂದಲೂ ಶಾಸಕ-ಅಧಿಕಾರಿಗಳಿಗೆ ಅರ್ಜಿ ಸಲ್ಲಿಸುತ್ತಾ ಬಂದಿದ್ದೇವೆ.

ಶಾನುವಳ್ಳಿಯಿಂದ ಈ ಮೇಲಿನ ಊರುಗಳ ಮೂಲಕ ಬಿಲಗದ್ದೆಗೆ ಸೇರುವಂತೆ ಊರವರೇ ಬಹು ಹಿಂದೆ ಒಂದು ರಸ್ತೆ ಅಂತ ನಿರ್ಮಿಸಿದ್ದೆವಾದರೂ. ಈ ಪ್ರದೇಶ ಅತಿ ಗುಡ್ಡಗಾಡಾಗಿದ್ದು, ರಸ್ತೆ ಬಹಳ ಕಡಿದಾದ ಏರುಗಳಿಂದ ಕೂಡಿರುವುದರಿಂದ ಅದರಲ್ಲಿ ಎತ್ತಿನ ಗಾಡಿಗಳು ಸಹ ಓಡಾಡಲು ಸಾಧ್ಯವಿಲ್ಲ. ಇದೇ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿ, ಸರ್ವಋತು ರಸ್ತೆಯಾಗಿ ಮಾರ್ಪಡಿಸಬೇಕೆಂಬುದು ನಮ್ಮ ಬೇಡಿಕೆಯಾಗಿದೆ.

ಶಾನುವಳ್ಳಿಯಿಂದ 1 ಕಿ. ಮೀ. ದೂರದವರೆಗೆ ತಾ. ಅ. ಮಂಡಲಿಯ ರಸ್ತೆಯಿದ್ದು ಅದೂ ರಿಪೇರಿ ಕಾಣದೆ ಹಲವು ವರ್ಷಗಳೇ ಸಂದಿವೆ. ಕಳೆದ ವರ್ಷ ಒಬ್ಬರು ಇಂಜಿನಿಯರ್ ಬಂದು ಎಸ್ಟಿಮೇಟ್ ಮಾಡಿಕೊಂಡು ಹೋದರು. ಕಂಟ್ರಾಕ್ಟರೊಬ್ಬರು 1 ಫರ್ಲಾಂಗ್ ದೂರ ರಸ್ತೆ ಕಡಿದರು. ಅನಂತರ ಅದೂ ನಿಂತು ಹೋಯಿತು. ಅಧಿಕಾರಿಗಳನ್ನು ವಿಚಾರಿಸಿದರೆ ಈ ವರ್ಷ ಆಗುತ್ತೆ, ಮಂಜೂರಾತಿಗೆ ಕಳಿಸಿದ್ದೇವೆ ಎಂದು ಹಾರಿಕೆಯ ಭರವಸೆ ಕೊಡುತ್ತಲೇ ಇದ್ದಾರೆ. ಇನ್ನು, ಓಟಿಗಾಗಿ ಮಾತ್ರ ಈ ದಿಕ್ಕಿಗೆ ಕಾಲಿರಿಸುವ ರಾಜಕೀಯಸ್ಥರಿಗಂತೂ ನಮ್ಮಗಳ ಓಟಿನ ಮೇಲಿರುವಷ್ಟು ವ್ಯಾಮೋಹ ಇಲ್ಲಿನವರ ಕ್ಷೇಮದ ಕಡೆಗೆ ಇರಲು ಬಹುಶಃ ಸಾಧ್ಯವೇ ಇಲ್ಲವೇನೋ! ಆದರೆ ಆಶ್ವಾಸನೆಗಳಿಗೇನೂ ಬರವಿಲ್ಲ, ಕೊನೆಯೂ ಇಲ್ಲ.

ಒಂದು ರಸ್ತೆಯಿಲ್ಲದೆ ಇಲ್ಲಿನವರ ಗೋಳು ಅಷ್ಟಿಷ್ಟಲ್ಲ. ಇಲ್ಲಿ ಬೇಸಿಗೆಯಲ್ಲೂ ಸಹ ರೋಗಿಗಳನ್ನು ಕಂಬಳಿಯ ಜೋಲಿಯಲ್ಲಿ ಶಾನುವಳ್ಳಿಯವರೆಗೆ ಹೊತ್ತುಕೊಂಡು ಹೋಗಿ ಅಲ್ಲಿಂದ ಬೇರೆ ವ್ಯವಸ್ಥೆ ಮಾಡಬೇಕಾಗಿದೆ.

ಇದುವರೆಗೂ ನಾವುಗಳು ಅರ್ಜಿಗಳನ್ನು ಸಲ್ಲಿಸುತ್ತಾ, ಭರವಸೆಗಳು ಹಣ್ಣಾಗುವುದನ್ನೇ ಕಾಯುತ್ತಾ ಕುಳಿತೆವು. ಇನ್ನು ಬದುಕಬೇಕಾದರೆ ನಾವೂ ಚಳುವಳಿಗೆ ಇಳಿಯಲೇಬೇಕೆಂಬ ವಾಸ್ತವ ನಮ್ಮೆದುರು ಬಂದಿದೆ. ಅದರ ಪ್ರಥಮ ಹಂತವಾಗಿ, ಈ ಭಾಗದ ಎಲ್ಲಾ 60-70 ಕುಟುಂಬದವರೂ ಒಗ್ಗಟ್ಟಾಗಿ ಮುಂಬರುವ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ಚುನಾವಣೆಗಳನ್ನು ಬಹಿಷ್ಕರಿಸಲು ನಿರ್ಧರಿಸಿದ್ದೇವೆ. ಅಷ್ಟೇ ಅಲ್ಲ, ನಮಗೊಂದು ಸದಾಕಾಲ ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆ, ಅದರಲ್ಲಿ ಬರುವ ಹಳ್ಳ - ತೊರೆಗಳಿಗೆಲ್ಲ ಮೋರಿ — ಇದಿಷ್ಟು ಆಗುವವರೆಗೆ ಮುಂದೆ ನಡೆಯುವ ಎಲ್ಲಾ ಚುನಾವಣೆಗಳನ್ನೂ ಬಹಿಷ್ಕರಿಸುತ್ತೇವೆ.

ನಮಗೆ ಯಾವ ಆಶ್ವಾಸನೆಯೂ ಬೇಕಿಲ್ಲ. ನಮಗೆ ಬೇಕಿರುವುದು ನಮ್ಮ ಬದುಕಿಗೆ ಅತಿ ಕನಿಷ್ಠ ಅವಶ್ಯಕತೆಯಾದ ಮಾರ್ಗ ಸೌಕರ್ಯ ಮಾತ್ರ. ಇದಕ್ಕಾಗಿ ನಾವು ನಡೆಸಲೇಬೇಕಾಗಿ ಬಂದಿರುವ ಈ ಚಳುವಳಿಯ ಬಗ್ಗೆ ಮುಖ್ಯಮಂತ್ರಿಗಳಿಗೂ, ಶಾಸಕರಿಗೂ, ತಾ॥ ಆಡಳಿತ ಪಕ್ಷದ ಅಧ್ಯಕ್ಷರಿಗೂ ಅರ್ಜಿಯ ಮುಖಾಂತರ ತಿಳಿಸಿದ್ದೇವೆ.

ಇಂತು, **ಗ್ರಾಮಸ್ಥರು,**

(60ಕ್ಕೂ ಹೆಚ್ಚು ಸಹಿಗಳಿವೆ.)

ಕೆರೆಯಿದ್ದೂ ಹಾಳುಬಿದ್ದ ಚಿನ್ನದ ಭೂಮಿ

(1ನೇ ಪುಟದಿಂದ)

ಒಂದು ಕುಟುಂಬದ ಇಬ್ಬರು ಹಿಸ್ಸೆದಾರರು ತಮ್ಮ ಜೀವನಕ್ಕೆ ಏಕೈಕ ಆಧಾರವಾಗಿದ್ದ 5 ಎಕರೆಯಲ್ಲಿ ಸುಮಾರು 4 ಎಕರೆಯಷ್ಟನ್ನು ಸಾಗುವಳಿ ಮಾಡಿ ಹೇಗೆ ಹೇಗೋ ನೀರನ್ನು ತರಲು ಹೆಣಗುತ್ತ ಬಣಗುತ್ತಿದ್ದರೆ ಅವರ ಹಸುಗೂಸಿನಂಥ ಗದ್ದೆಗಳು ಅವರಿಗಿಂತ ಮೊದಲೇ ಒಣಗುತ್ತ ಅವರ ಹೃದಯವನ್ನೂ ಹಿಂಡಿ ಒಣಗಿಸುತ್ತಿವೆ.

ಈ ಗದ್ದೆ ಕೋಗಿನ ಕೆಳಗಡೆ ನಾರಾಯಣ ಎಂಬ ಇನ್ನೊಬ್ಬ ಬಡ ರೈತರ ಜಮೀನಿದ್ದು, ಅದಕ್ಕೆ ಸಣ್ಣ ಕೆರೆ ಶ್ರೀನಿವಾಸಗೌಡರ ಜಮೀನಿನ ಬಳಿಯಿಂದ ಅವರಿಬ್ಬರ ತಂದೆಗಳ ಕಾಲದಿಂದಲೂ ಬರುತ್ತಿದ್ದ ನೀರಿಗೆ ಈಚೆಗೆ ಕೆಲ ವರ್ಷಗಳಿಂದ ಸಂಚಕಾರ ಬಂದಿದೆ. ಆದರೂ ಈ ಗದ್ದೆ ಬಿಟ್ಟರೆ ಮನೆ ಮಂದಿಗೆಲ್ಲ ಕೂಲಿಯೇ ಜೀವನೋಪಾಯವಾಗಿರುವ ನಾರಾಯಣ ಅವರು, ಮಳೆಗಾಲದಲ್ಲಿ ಗದ್ದೆ ಹಾಳು ಬಿಡಲಾರದೆ ಸಾಗುವಳಿ ಮಾಡಿ ಫಸಲು ಕೈಗೆ ಬರುವ ಸಮಯಕ್ಕೆ ಗದ್ದೆ ಸುಟ್ಟು ಹೋಗುತ್ತಿತ್ತು. ಅದನ್ನು ನೋಡಲಾರದೆ ಮೇಲಿನ ಗದ್ದೆಗಳ ಈ ರೈತರು ಕೆಲ ವರ್ಷಗಳಿಂದ ತಮ್ಮ ನೀರಿನಲ್ಲೇ ಸ್ವಲ್ಪ ಅವರಿಗೂ ಒದಗಿಸಿ ಉಪಕರಿಸುತ್ತಿದ್ದರು. ಆದರೆ ಈಗ್ಗೆ ಮೂರು ವರ್ಷಗಳಿಂದ ಈ ಮಾನವೀಯ ನಡತೆಗೂ ಕತ್ತರಿ ಬಿದ್ದಿದೆ.

ಈಗಲಾದರೂ ಲೋಕೋಪಯೋಗಿ ಇಲಾಖೆಯ ನೀರಾವರಿ ವಿಭಾಗ ಇದೊಂದು ಸಣ್ಣ ಕೆಲಸವನ್ನು ತುರ್ತಾಗಿ ಮಾಡಿಕೊಟ್ಟು, ಚಿನ್ನ ಬೆಳೆವ ಈ ಜಮೀನಿಗೆ ಪುನಃ ಜೀವ ತುಂಬೀತೆ?

ಬರಗಾಲ — ಏಕೆ ಮತ್ತು ಹೇಗೆ ?

(4ನೇ ಪುಟದಿಂದ)

ಪ್ರಕೃತಿಯ ಶಕ್ತಿಗಳ ಮೇಲೆ ಕಾಲ, ಹವಾಮಾನ ವೈಪರೀತ್ಯಗಳ ಮೇಲೆ ಸಂಪೂರ್ಣ ಸ್ವಾಮ್ಯ ಸಾಧಿಸುವಷ್ಟು ವಿಜ್ಞಾನ ಇನ್ನೂ ಬೆಳೆದಿಲ್ಲ. ಆದರೆ ಇಂಥ ಪರಿಸ್ಥಿತಿಗಳಿಗೆ ಕಾರಣವಾಗುವ ಶಕ್ತಿಗಳನ್ನು ಗುರುತಿಸಿ, ಜನರನ್ನು ಸಾಮ್ರಾಜ್ಯಶಾಹಿಗಳ ಮತ್ತು ಊಳಿಗಮಾನ್ಯರ* ವಿರುದ್ಧ ಒಗ್ಗೂಡಿಸಿ, ಹೀಗೆ ಬರಗಾಲವನ್ನು ಉಂಟುಮಾಡಿ ಜನರನ್ನು ಸುಲಿಗೆ ಮಾಡುವ ಮಾನವ ವರ್ಗಗಳನ್ನು ಇಲ್ಲವಾಗಿಸಬಲ್ಲ ಕ್ರಾಂತಿಯನ್ನು ತರುವಷ್ಟು ವಿಜ್ಞಾನ ಖಂಡಿತಾ ಬೆಳೆದಿದೆ, ಮುಂದುವರಿದಿದೆ.

ಲೇಖಕರು : **ಬಸವರಾಜು. ಪಿ.**

ಸೌಜನ್ಯ : 'ವಿಮುಕ್ತಿ'

*** ಟಿಪ್ಪಣಿಗಳು :**

1) ಅರೆ ಊಳಿಗಮಾನ್ಯ – ವಸಾಹತುಶಾಹಿ ಸರ್ಕಾರ = ಪ್ರಜೆಗಳ ಪಾಲಿಗೆ ಪಾಳೇಗಾರಿ ರೀತಿಯ ಪ್ರಭುತ್ವ, ಹೊರಗಿನ (ಬ್ರಿಟಿಷ್) ಪ್ರಭುಗಳಿಗೆ ಗುಲಾಮ್ಗಿರಿ ದ್ದಂಥ ಸರ್ಕಾರ.

2) ಬೂರ್ಜ್ವಾ = ಬಂಡವಾಳಗಾರ.
ಬಂಡವಾಳಶಾಹಿ (ಬೂರ್ಜ್ವಾಸಿ) = ಬಂಡವಾಳಗಾರರ ವರ್ಗ ಅಥವ ಪ್ರಭುತ್ವ –

3) ದಳ್ಳಾಳಿ ಬಂಡವಾಳಶಾಹಿ = ನಮ್ಮ ದೇಶದ ಟಾಟಾ, ಬಿರ್ಲಾ, ಸಿಂಘಾನಿಯಾ.... ಮುಂತಾದ ಈ ಎಲ್ಲಾ ಬೃಹತ್ ಬಂಡವಾಳಶಾಹಿಗಳು ನಿಜವಾಗಿಯೂ ಪೂರ್ಣ ಸ್ವತಂತ್ರರಾಗಿರದೆ, ವಿದೇಶಿ ಬಂಡವಾಳಶಾಹಿಗಳ ಅಥವಾ ಪ್ರಭುತ್ವಗಳ ಹಿತಾಸಕ್ತಿ – ಅಪೇಕ್ಷೆ – ಆಜ್ಞೆಗಳನ್ನು ಮೀರಲಾರದ, ಅವರ ಇಚ್ಛಾನುವರ್ತಿಗಳಾದ, ಪರೋಕ್ಷ ರೀತಿಯಲ್ಲಿ ಅವರ ಏಜೆಂಟರಾದ ವರ್ಗವಾಗಿದ್ದಾರೆ. ಆದಕ್ಕೇ ನಮ್ಮ ದೇಶದ ಬಂಡವಾಳಶಾಹಿಯನ್ನು ದಳ್ಳಾಳಿ – ಬಂಡವಾಳಶಾಹಿಯೆಂದು ಕರೆಯಲಾಗುತ್ತದೆ

4) ಊಳಿಗಮಾನ್ಯ ವರ್ಗ = ಮೂಢನಂಬಿಕೆ, ಮತಾಂಧತೆಗಳೂ ಸೇರಿದಂತೆ ಹಿಂದಿನ ಪಾಳೇಗಾರಿ ಪ್ರವೃತ್ತಿಯ ದೊಡ್ಡ ಭೂಮಾಲೀಕ ವರ್ಗ. ಇಂದು ಇವರು ಈ ಎಲ್ಲಾ ಪ್ರವೃತ್ತಿಗಳ ಜೊತೆಗೆ ಎಲ್ಲಾ ತರದ ಆಧುನಿಕ (ವಿಜ್ಞಾನ ಯುಗದ) ಸವಲತ್ತುಗಳನ್ನೂ ಬಳಸಿಕೊಂಡು ಮತ್ತಷ್ಟು — ಹಿಂದಿನ ಪಾಳೇಗಾರರುಗಳ ನೂರ್ಮಡಿ — ಬಲಿಷ್ಠರಾಗಿದ್ದಾರೆ. ನೆಪಕ್ಕೆ ಯಾವುದೇ ಪಕ್ಷದ ಸರಕಾರವಿದ್ದರೂ ನಮ್ಮ ದೇಶವನ್ನು ಇಂದು ನಿಜವಾಗಿ ಆಳುತ್ತಿರುವುದು — ದಳ್ಳಾಳಿ ಬಂಡವಾಳಶಾಹಿ ಮತ್ತು ಈ ಅರೆ – ಊಳಿಗಮಾನ್ಯ ವರ್ಗಗಳನ್ನೊಳಗೊಂಡ ಒಂದು 'ಸಂಮಿಶ್ರ' ಆಳುವ ವರ್ಗ.

ಕೊಪ್ಪ ಕ್ರಿಕೆಟ್ ತಂಡಕ್ಕೆ ಚಾಂಪಿಯನ್‌ಶಿಪ್

ಕೊಪ್ಪ : ಬಾಳೆಹೊನ್ನೂರಿನ ಯಂಗ್ ಸ್ಟರ್ಸ್ ಕ್ರಿಕೆಟ್ ಕ್ಲಬ್ ಆಶ್ರಯದಲ್ಲಿ ಅ. 15ರಿಂದ 25ರವರೆಗೆ ನಡೆದ ಚಿಕ್ಕಮಗಳೂರು ಜಿಲ್ಲಾ ಮಟ್ಟದ ಆಹ್ವಾನ ನಿಯಮಿತ ಓವರ್‌ಗಳ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಕೊಪ್ಪದ ಫ್ರೆಂಡ್ಸ್ ಕ್ರಿಕೆಟ್ ಅಸೋಸಿಯೇಶನ್ ತಂಡ ಚಿಕ್ಕಮಗಳೂರಿನ ನೂರ್ ತಂಡದ ವಿರುದ್ಧ 35 ಓವರ್‌ಗಳಲ್ಲಿ 9 ವಿಕೆಟ್‌ಗೆ 157 ರನ್ ಗಳಿಸಿ 50 ರನ್‌ಗಳ ವಿಜಯ ಸಾಧಿಸಿ ಚಾಂಪಿಯನ್‌ಶಿಪ್ ಪಡೆಯಿತು. ನೂರ್ ತಂಡ 32 ಓವರ್‌ಗಳಲ್ಲಿ 107 ರನ್ನಿಗೆ ಆಲೌಟ್ ಆಯಿತು.

ವಿಜೇತ ತಂಡದ ಕೆ.ವಿ. ರಮೇಶ್ 47 ಮತ್ತು ನಿಸಾರ್ ಅಹಮದ್ 38 ರನ್ ಗಳಿಸಿದರೆ, ಬೌಲರ್‌ಗಳಲ್ಲಿ ಮ್ಯಾಥ್ಯೂ 3 ಮತ್ತು ಈಶ್ವರ್ ಹಾಗೂ ಅಶ್ವಿನ್ ತಲಾ 2 ವಿಕೆಟ್ ಪಡೆದರು.

ಅಂದು ಸಂಜೆ ವಿಜೇತ ತಂಡದವರು ಮತ್ತು ಅವರ ಅಭಿಮಾನಿಗಳು ಪೇಟೆಯಲ್ಲಿ ವಿಜಯೋತ್ಸವ ಮೆರವಣಿಗೆ ನಡೆಸಿ ಸಂಭ್ರಮ ಪಟ್ಟರು.

(ವರದಿ : ಕೆ. ಎಸ್. ಶಿವಾನಂದ್.)

'ಸಿ ಅಂಡ್ ಡಿ', ನೀಲಗಿರಿ ವಿರುದ್ಧ ನ. 14ಕ್ಕೆ ಪ್ರತಿಭಟನೆ: ಸರ್ವಪಕ್ಷ ಸಹಕಾರಕ್ಕೆ ಕರೆ

ಹರಿಹರಪುರ: ಮಲೆನಾಡಿನಲ್ಲಿ ಅರಣ್ಯ ಇಲಾಖೆ ರೈತರಿಗೆ ಉಪಯೋಗವಾಗಬಲ್ಲ ಭೂಮಿಯನ್ನು 'ಸಿ ಅಂಡ್ ಡಿ' ಎಂದು ವರ್ಗೀಕರಿಸುತ್ತಿರುವುದು ಹಾಗೂ ನೀಲಗಿರಿ ಬೆಳೆಯನ್ನು ಹೆಚ್ಚಿಸುತ್ತಿರುವುದರ ವಿರುದ್ಧ ನ. 14ರಂದು ಕೊಪ್ಪ ಮತ್ತು ಹರಿಹರಪುರಗಳಲ್ಲಿ ಪ್ರತಿಭಟನೆ ನಡೆಸಲಿದ್ದು, ರೈತರ ಹಿತ ಬಯಸುವ ಎಲ್ಲಾ ಪಕ್ಷದವರೂ ಪಾಲ್ಗೊಳ್ಳಬೇಕೆಂದು ಬಿ.ಎಂ.ರಘುನಾಥ್ ಕೋರಿದ್ದಾರೆ.

ಸಹಕಾರಿ ಕ್ಷೇತ್ರದ ಬಗ್ಗೆ ಚಲನ ಚಿತ್ರ ಪ್ರದರ್ಶನ

ಹರಿಹರಪುರ: ಇಲ್ಲಿನ ಬಸ್‌ಸ್ಟ್ಯಾಂಡ್ ಸಮೀಪದಲ್ಲಿ ಅ. 31ರ ಸಂಜೆ 6.30ಕ್ಕೆ ಕರ್ನಾಟಕ ಕೃಷಿ ಮತ್ತು ಗ್ರಾ. ಅ. ಬ್ಯಾಂಕ್ ವತಿಯಿಂದ ಸಹಕಾರಿ ಕ್ಷೇತ್ರದ ಬಗ್ಗೆ ಚಲನಚಿತ್ರ ಪ್ರದರ್ಶನವಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೊಪ್ಪ ಭೂ ಬ್ಯಾಂಕ್ ಅಧ್ಯಕ್ಷ ಕೋಣೆಗದ್ದೆ ಪದ್ಮನಾಭ ಕೋರಿದ್ದಾರೆ.

ಅಡಿಕೆ ಧಾರಣೆ

ಶಿವಮೊಗ್ಗ ತಾ॥ 28.10.1986

ಸರಕು: 2789 – 3589
ಬೆಟ್ಟೆ: 1679 – 2065
ಗೊರಬಲು: 601 – 990

ಸಾಗರ ತಾ॥ 28.10.86

ಆಪಿ ರೂ. 3009 – 3616
ಚಾಲಿ: ರೂ. 1670 – 1960
ಸಿಪ್ಪೆ ಗೋಟು 659 – 990

ಏಲಕ್ಕಿ ಧಾರಣೆ

ಸಕಲೇಶಪುರ

ತಾರೀಕು	ಗರಿಷ್ಠ	ಸರಾಸರಿ
13.10.86	208	142
14.10.86	219	153
15.10.86	209	133
16.10.86	216	145
17.10.86	220	145

ಮಲೆನಾಡಿನ ಏಲಕ್ಕಿ (ಈ ವಾರ)
140 – 195

ಸಿರ್ಸಿ

15.10.86	186	337

ನೀರು ಬಂತು ಬಾವಿ ಇಲ್ಲ!

(ನಮ್ಮ ಪ್ರತಿನಿಧಿಯಿಂದ)

ಹೇರೂರು: ಇಲ್ಲಿಗೆ ಸಮೀಪದ ದೂಬಳ ರಸ್ತೆಯ ಎಡ ಬಲಗಳಲ್ಲಿ ಜನತಾ ಮನೆಗಳು ತಲೆಎತ್ತಿ ನಿಂತಾಗ ಬಂದ ನೀರಿನ ಸಮಸ್ಯೆಗೆ ಒಂದು ಬೋರ್‌ವೆಲ್ ತೋಡಲಾಯಿತು. ಅದು ಕೆಲಸಕ್ಕೆ ಬಾರದೇ ಇದ್ದಾಗ ಬಾವಿ ಮಂಜೂರಾಯಿತು. ಈಗ ಬಾವಿಯ ಕೆಲಸ ಕೊನೆಯ ಹಂತಕ್ಕೆ ಬಂದಿದೆ. ಆದರೆ ಕಟ್ಟೆಗಾಗಿ ತಂದು ಹಾಕಿದ್ದ ಕಲ್ಲುಗಳನ್ನು ಈಗ ಕಂಟ್ರಾಕ್ಟರರೇ ಬೇರೆಡೆಗೆ ಸಾಗಿಸಿದ್ದಾರೆ. ಕಲ್ಲಿನ ಕಟ್ಟೆ ಆಗದೆ ಮಣ್ಣು ಕುಸಿಯುತ್ತಿದೆ.

'ನೀರು ಬಂತು ಬಾವಿ ಇಲ್ಲ' ಎಂದು ಈ ಪರಿಸರದ ಜನ ಗೋಳಿಡುತ್ತಿದ್ದಾರೆ.

ರಾ. ಸೇ. ಯೋ. ಶಿಬಿರ ಯಶಸ್ಸಿಗೆ ನೆರವಾದವರಿಗೆ ಧನ್ಯವಾದ

ಶೃಂಗೇರಿ: ಅ. 6ರಿಂದ 15ರವರೆಗೆ ಹತ್ತು ದಿನಗಳ ಕಾಲ ಕೊಪ್ಪ ತಾಲ್ಲೂಕಿನ ಕಮ್ಮರಡಿಯಲ್ಲಿ ನಡೆದ ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಆಶ್ರಯದ ವಾರ್ಷಿಕ ವಿಶೇಷ ಸೇವಾ ಶಿಬಿರವನ್ನು ಯಶಸ್ವಿಗೊಳಿಸುವಲ್ಲಿ ನೆರವಾದ ಎಲ್ಲರಿಗೂ ಪ್ರಿನ್ಸಿಪಾಲರು ಧನ್ಯವಾದ ಸಲ್ಲಿಸಿ, ಇದೇ ರೀತಿಯ ಸಹಕಾರವನ್ನು ಮುಂದೆಯೂ ನೀಡಬೇಕಾಗಿ ಕೋರಿದ್ದಾರೆ.

ಎ. ಬಿ. ವಾಸಪ್ಪ ವಿರುದ್ಧ ಪದ್ಮನಾಭ್‌ಗೆ ಜಯ

ಕೊಪ್ಪ: ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷ ಸ್ಥಾನಕ್ಕಾಗಿ ಅ. 20ರಂದು ಚುನಾವಣೆ ನಡೆದು ಎ. ಬಿ. ವಾಸಪ್ಪಗೌಡರ ವಿರುದ್ಧ ಕೆ. ಎಸ್. ಪದ್ಮನಾಭ 7–4 ಮತಗಳಿಂದ ಗೆದ್ದಿದ್ದಾರೆ.

ಮಳೆ ವಿಫಲ — ಭತ್ತಕ್ಕೆ ಹಾನಿ : ಪರಿಹಾರಕ್ಕೆ ಒತ್ತಾಯ

ಕೊಪ್ಪ: ಮಲೆನಾಡಿನಲ್ಲಿ ಈ ವರ್ಷ ಮಳೆ ವಿಫಲವಾಗಿದ್ದು, ಮುಖ್ಯವಾಗಿ ಭತ್ತದ ಫಸಲಿಗೆ ತೀವ್ರ ಹಾನಿಯಾಗಿದೆ. ಈ ಬಗ್ಗೆ ಸರ್ಕಾರ ರೈತರಿಗೆ ಸೂಕ್ತ ರೀತಿಯಲ್ಲಿ ಪರಿಹಾರ ದೊರಕಿಸಬೇಕೆಂದು ಕೊಪ್ಪ ತಾ॥ ಬಿಜೆಪಿ ಅಧ್ಯಕ್ಷ ಬಿ.ಎಂ. ರಘುನಾಥ್ ಒತ್ತಾಯಿಸಿದ್ದಾರೆ.

ಭತ್ತದ ಬೆಳೆಗೆ ರೋಗ : ಔಷಧಿ ಸಿಂಪರಣೆಗೆ ಸಲಹೆ

ಹವಾಮಾನದ ಏರುಪೇರಿನಿಂದಾಗಿ ಈ ಸಾಲಿನ ಭತ್ತದ ಬೆಳೆಗೆ ಎಲೆಚುಕ್ಕೆ ರೋಗ ಹಾಗೂ ಬೆಂಕಿರೋಗ ಜಾಸ್ತಿಯಾಗಿ ಕಾಣಿಸಿ ಕೊಂಡಿರುವುದರಿಂದ ರೈತರು ತಮ್ಮ ಭತ್ತದ ಬೆಳೆಗೆ ಪರಿಸ್ಥಿತಿಗೆ ಅನುಗುಣವಾಗಿ 'ಹಿನೋಸಾನ್' ಅಥವಾ 'ಬಾವಿಸ್ಟೀನ್' ಅಥವಾ 'ಡೈಥಿಯಾನ್ ಎಂ–45' ರೋಗ ನಾಶಕ ಔಷಧಿಯನ್ನು ಸಿಂಪರಣೆ ಮಾಡಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ಅಧಿಕಾರಿಗಳನ್ನಾಗಲಿ, ಕೃಷಿ ಸಹಾಯಕರನ್ನಾಗಲಿ ಅಥವಾ ಶೃಂಗೇರಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನಾಗಲಿ ಸಂಪರ್ಕಿಸಬಹುದು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಿಕಾ ಆಫ್ಸೆಟ್, ಕೊಪ್ಪ